A.—Sri K. MALLAPPA (Minister for Industries and Commerce).—

(*a*) Yes.

(*b*) Five.

(*c*) The State Government recommended to the Government of India for the grant of a licence for establishment of a cotton spinning mill at Bellary.

First Report of the Committee on Petitions—Presented.

Sri A. R. PANCHAGAVI.—Sir, I beg to present the first report of the Committee on Petitions.

Mr. SPEAKER.—The report is presented.

Members' Representations.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ನಾನು ಒಂದು ಮುಖ್ಯವಾದ ವಿಷಯದಬಗ್ಗೆ calling attention motion ಕಳುಹಿಸಿದ್ದೆ.

Mr. SPEAKER.—When did the Hon'ble Member send it ?

ಶ್ರೀ ಎಸ್. ಗೋಪಾಲಗೌಡ.—ಬಹಳ ದಿವಸ ಆಯಿತು, 8ನೇ ತಾರೀಖು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಪೋಲೀಸ್‌ನವರು ಹಿಡಿದುಕೊಂಡು ಬೂಟ್‌ನಿಂದ ಹೊಡೆದಿದ್ದಾರೆ ಅದನ್ನು ದಯಮಾಡಿ ತಾವು ನೋಡಬೇಕು.

Mr. SPEAKER.—I have not seen it. I will look into it. Can he tell me on what date he delivered it in the office ?

ಶ್ರೀ ಎಸ್. ಗೋಪಾಲಗೌಡ.—ಅಲಂಕಾರ್ ಥಿಯೇಟರ್‌ನಲ್ಲಿ ಗಲಾಟೆ ಆಯಿತಲ್ಲಾ ಆ ದಿನ, 8ನೇ ತಾರೀಖು.

ಅಧ್ಯಕ್ಷರು.—8ನೇ ತಾರೀಖು ಶನಿವಾರ, ಮಾರನೇ ದಿನ ಆದಿತ್ಯವಾರ ರಜೆ ಇತ್ತು, ನಿನ್ನೆದಿವಸ ಮಾನ್ಯ ಸದಸ್ಯರ ಪತ್ರ ಸಿಕ್ಕಿದೆ, ನೋಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಕೊಟ್ಟ ದಿವಸ working day ಇತ್ತು. ನಾನೀಗ ತಾವು ಅದನ್ನು allow ಮಾಡಿದ್ದೀರಿ ಎಂದು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಹೋಂ ಮಿನಿಸ್ಟರು ಇಷ್ಟರಲ್ಲೇ ಅದಕ್ಕೆ ಒಂದು ಹೇಳಿಕೆ ಕೊಡಬಹುದಾಗಿತ್ತು.

Mr. SPEAKER.—It is not in the agenda.

ಶ್ರೀ ಎಸ್. ಗೋಪಾಲಗೌಡ.—ನಾನು ಅದನ್ನು calling attention motion ಆಗಿ treat ಮಾಡಬೇಕೆಂಬುದರ ಬಗ್ಗೆ ತಮ್ಮ ಗಮನವನ್ನು ಸೆಳೆಯಬೇಕೆಂದಿದ್ದೇನೆ. ಏಕೆಂದರೆ calling attention motion ಕಳುಹಿಸುವುದು ಯಾವಾಗ? ಸಾಮಾನ್ಯವಾಗಿ ಮುಖ್ಯವಾದ ವಿಷಯ ಇದ್ದರೇ ಅದನ್ನು ತಮ್ಮ ಗಮನಕ್ಕೆ ತರುತ್ತೇವೆ. ತಂದಾಗ ತಾವು ಅದು calling attention motion ಮೂಲಕ ತರುವುದು ಅಷ್ಟು ಉಚಿತವಲ್ಲ ಎಂದಾಗ ತಕ್ಷಣ disallow ಮಾಡಿದ್ದೇನೆ ಎಂದು ನನಗೆ ತಿಳಿಸಬೇಕು. ಆಗ ನಾನು ಬೇರೆ ವಿಧಾನಗಳನ್ನುಪಯೋಗಿಸಿ ಆ ಪ್ರಶ್ನೆಯನ್ನು ಸಭೆಯಮುಂದೆ ತರುವುದಕ್ಕೆ ಪ್ರಯತ್ನಪಡಬಹುದು. ಇದಕ್ಕೆ ಇಷ್ಟು ದಿವಸದಲಾಗಾಯ್ತು ಯಾವ ಉತ್ತರವೂ ತಮ್ಮ ಆಫೀಸಿನಿಂದ ಬಂದಿಲ್ಲ. ಮೇಲಾಗಿ ಸಂಬಂಧಪಟ್ಟ ಮಂತ್ರಿಗಳು ಈ ವಿಷಯದಲ್ಲಿ ಏನೂ ಹೇಳಲಿಲ್ಲ. ಆದ್ದರಿಂದ ಇದರ ಬಗ್ಗೆ ಕೂಡಲೇ ಸರ್ಕಾರದವರಿಗೆ ತಿಳಿಸಿ ಸಂಬಂಧಪಟ್ಟ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುವುದು ಬಹಳ ಅಗತ್ಯವಾಗಿದೆ. ಆದ್ದರಿಂದ ತಮ್ಮಲ್ಲಿ ವಿನಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಸ್ವಾಮಿ, ಈ ವಿಷಯದಲ್ಲಿ ತಾವ್ ಅದಷ್ಟು ತೀವ್ರ ಗಮನ ಕೊಡಬೇಕೆಂದು ಹೇಳಿ. ಅದಕ್ಕಿಂತ ಹೆಚ್ಚಾಗಿ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

Mr. SPEAKER.—I have heard the Hon'ble Member. I have already mentioned that I have not seen the letter. I made casual enquiries and I will look into it. Before that I cannot give any assurance to any member.

ಶ್ರೀ ಕೆ. ಎಚ್. ರಂಗನಾಥ್ (ಮೂಡಗೆರೆ).—16-6-1962ರಲ್ಲಿ ಪ್ರಶ್ನೆ ಕಳುಹಿಸಿದ್ದೆ. ಇದುವರೆಗೂ ಅದಕ್ಕೆ ಉತ್ತರ ಬರಲಿಲ್ಲ.

Mr. SPEAKER.—That is a matter about which he can kindly write to me see me in my chamber and not raise it on the floor of the House.

Now we will take up the next item on the agenda.

MYSORE STAMP (AMENDMENT) BILL, 1962.

Motion to consider.

Sri M. V. KRISHNAPPA (Minister for Revenue).—I move :

> "That the Mysore Stamp (Amendment) Bill, 1962, be taken into consideration."

Mr. SPEAKER.—Motion moved :

> "That the Mysore Stamp (Amendment) Bill, 1962, be taken into consideration."

†**Sri S. SIVAPPA** (Sravanabelagola).—Sir, I move an amendment to the Bill:

> "That the Mysore Stamp (Amendment) Bill, 1962, be circulated for eliciting public opinion and brought on or before this House before 10th October 1962."

Mr. SPEAKER.—Amendment moved:

> "That the Mysore Stamp (Amendment) Bill, 1962, be circulated for eliciting public opinion and brought on or before this House before 10th October 1962."

Sri S. SIVAPPA.—Mr. Speaker, this Bill is a very important piece of legislation brought before this House. By the way this Bill has been brought before this House, it looks as though the Government is particular about hustling through this legislation in a hasty manner. This will affect a very large section of the population. This Bill seeks to increase the taxation by 50 per cent by one stroke of the pen. This heavy imposition of tax on the people requires calm and cool thinking. It is therefore, very necessary to know the opinion of the public about this measure. Why I am very particular about this is, this Government did not say that they would be increasing taxes in this manner at the time of elections in their election manifesto. So, the people should be able to express their opinion in this matter. I, therefore, earnestly appeal to them that they should not be hasty in enacting such a measure. They have already enacted two Acts and they are bringing a large number of such measuresand we should know the feel- of the ings public on such measures. After all I have asked for time till October 10th. I request them to accept this amendment and postpone the measure by about a month.

Sri G. V. GOWDA (Palya).—I support the amendment moved by the Leader of the Opposition. As you are aware, this Bill seeks to enhance the stamp duty by 50 per cent. It is desirable to elicit public opinion. Most of the people, especially the poor and the lower middle class people are affected by this increase. In the interest of these people who are affected by this levy, it is desirable to have this Bill circulated for eliciting public opinion.

(*Sri K. Lakkappa rose.*)

Mr. SPEAKER.—I have already said that it is only an amendment and he has mentioned the reasons. If there is going to be a debate and if everybody wants to speak on this amendment, there will be no time Is he going to add anything new?

Sri K. LAKKAPPA (Hebbur).—About the amendment...

Mr. SPEAKER.—If it is a repetition, I am not going to allow it.

Sri K. LAKKAPPA.—It is a new point.

Sri C. J. MUCKANNAPPA (Sira).—How can we know if it is a new point unless he speaks?

Mr. SPEAKER.—Why does he try to mislead him? Does he not know his own point? It must be a new point.

ಶ್ರೀ ಕೆ. ಲಕ್ಕಪ್ಪ.—ಈಗ ತಾನೆ ನಮ್ಮ ನಾಯಕರು ಮಂಡಿಸಿದ ತಿದ್ದುಪಡಿಯನ್ನು ಅನುಮೋದಿಸುತ್ತಾ ಈ ಸರ್ಕಾರ ಈಗಾಗಲೆ ಅನೇಕ ತೆರಿಗೆಗಳ ಮಸೂದೆಗಳನ್ನು ಈ ಸಭೆಯ ಮುಂದೆ ತಂದಿದೆ, ಈ ತೆರಿಗೆಗಳ ಬಗ್ಗೆ ಆಗಲೆ ಪ್ರತಿಭಟನೆ ಕೂಡ ಬಂದಿದೆ. ಇವತ್ತಿನ ದಿವಸ ತಂದಿರುವ ಸ್ಟಾಂಪ್ (ತಿದ್ದುಪಡಿ) ವಿಧೇಯಕನನ್ನು ಪ್ರಜಾಭಿಪ್ರಾಯ ಪಡೆಯದೆ ತಂದಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಜನರಿಗೆ ಸಂಪೂರ್ಣ ಅಧಿಕಾರವಿದೆ.

Mr. SPEAKER.—Opposing the Bill, he could do later.

Sri K. LAKKAPPA.—This amendment has to be supported by the House. I would just like to explain the position.

ಇದನ್ನೇಕೆ ಹೇಳುತ್ತಿದ್ದೇನೆಂದರೆ ಪ್ರಜಾಪ್ರಭುತ್ವದಲ್ಲಿ ಪ್ರಜಾಭಿಪ್ರಾಯ ಬಹಳ ಮುಖ್ಯವಾದುದು. ಚುನಾವಣೆಗೆ ನಿಂತಾಗ ಇಷ್ಟು ತೆರಿಗೆ ಹಾಕುತ್ತೇವೆ ಎಂದು ನೀವು ಹೇಳಿದ್ದರೆ, ಹೆಲ್ತ್ ಸೆಸ್ ಹಾಕುತ್ತೇವೆ, ಸ್ಟ್ಯಾಂಪ್ ಡ್ಯೂಟಿ ಹಾಕುತ್ತೇವೆಂದು, ಮನೆಗಳ ಮೇಲೆ ತೆರಿಗೆ ಹಾಕುತ್ತೇವೆಂದು ಹೇಳಿದ್ದರೆ ಚುನಾವಣೆಗೆ ನಿಲ್ಲುವುದಕ್ಕೇ ಸಾಧ್ಯವಾಗುತ್ತಿರಲಿಲ್ಲ. ಜನರನ್ನು ಬಹಳ ತಪ್ಪುದಾರಿಗೆ ಎಳೆದು, ಅವರಿಗೆ ತಪ್ಪು ತಿಳುವಳಿಕೆ ಕೊಟ್ಟು ಜನರಿಗೆ ವಂಚನೆ ಮಾಡಿ ಈ ತೆರಿಗೆಯನ್ನು ಈ ದಿವಸ ವಿಧಿಸುತ್ತಿದ್ದೀರಿ.

Mr. SPEAKER.—Is it in support of the amendment?

Sri K. LAKKAPPA.—Yes, Sir. That is why I am explaining the position, that they have misled the people and have now introduced this Bill.

Mr. SPEAKER.—If that is the kind of explanation he will be giving, I will be constrained to ask him to resume his seat.

ಶ್ರೀ ಕೆ. ಲಕ್ಕಪ್ಪ.—ಈ ತಿದ್ದುಪಡಿಯಲ್ಲಿ ಬಹಳ ಮಹತ್ವವಿದೆ. ಈಗ ತಾನೆ ಚುನಾವಣೆಗಳಲ್ಲಿ ಗೆದ್ದು ಬಂದಿದ್ದಾರೆ. ಮೊದಲೇ ಜನರಿಗೆ ಈ ತೆರಿಗೆ ಹಾಕುತ್ತೇವೆಂದು ಹೇಳಿದ್ದರೆ ಚೆನ್ನಾಗಿತ್ತು. ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ ಈ ದಿವಸ ತೆರಿಗೆ ಹಾಕುತ್ತಿದ್ದಾರೆ.

Mr. SPEAKER.—Is it a point for circulation of the Bill or opposing the Bill ?

Sri K. LAKKAPPA.—I am speaking in support of the amendment. ತೆರಿಗೆ ಹಾಕಿದ್ದರೆ ಮೊದಲೇ ಅಧಿಕಾರಕ್ಕೆ ಬರುತ್ತಿರಲಿಲ್ಲ. ಮೊದಲೇ ತಿಳಿಸದೇ ಹೋದುದು ಸರಿಯಲ್ಲ. ಪ್ರಜಾಭಿಪ್ರಾಯ ಪಡೆಯದೆ ರೈತರ ಮೇಲೆ ಈ ರೀತಿ ತೆರಿಗೆ ಹಾಕುವುದು ಉಚಿತವಲ್ಲ.

Sri J. H. SHAMSUDDIN (Deputy Minister for Electricity).—On a point of information, if the Hon'ble Member yields. Is the Hon'ble Member aware that the Congress Party declared that they would get 42 crores of rupees for the implementation of the Third Five Year Plan, which was there before the country even before the elections ?

Sri C. J. MUCKANNAPPA.—He is asking about the present Cabinet.

ಶ್ರೀ ಕೆ. ಲಕ್ಕಪ್ಪ.—ತೆರಿಗೆ ಹಾಕಿ ಈ ರೀತಿ ಪ್ಲಾನ್ ಮಾಡುತ್ತೇವೆಂದು ಮೊದಲೇ ಹೇಳದೆ ಈ ದಿವಸ ಹಾಕುತ್ತಿರುವುದರಿಂದ ಪ್ರಜಾಭಿಪ್ರಾಯ ಮೊದಲು ತಿಳಿಯಬೇಕಾದ್ದು ಅವಶ್ಯಕ. ಆದುದರಿಂದ ನಮ್ಮ ನಾಯಕರು ತಂದಿರುವ ತಿದ್ದುಪಡಿಗೆ ಎಲ್ಲರೂ ಬೆಂಬಲ ಕೊಡಬೇಕು, ಸರ್ಕಾರ ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ.

Mr. SPEAKER.—There is nothing new he has added and whenever he makes a representation that...

Sri K. LAKKAPPA.—Sir, it is against the will of the people that they have introduced these taxation measures.

Mr. SPEAKER.—That it is a new point which the Hon'ble member Sri Sivappa introduced—does he think like that ?

Sri K. LAKKAPPA.—In support of my leader.

Mr. SPEAKER.—He said that he had a new point.

Sri B. D. JATTI.—Whenever the Third Five Year Plan was discussed, the size of the Plan was also discussed. The amount of forty-two crores, the amount that has to be raised, was also mentioned. He is perhaps a new member of this House and he does not know what has happened before the elections.

Sri K. LAKKAPPA.—That I do not know—my friend is mistaken.

Sri M. V. KRISHNAPPA.—I am only sorry, Sir, to hear from the Hon'ble Leader of the Opposition and his able lieutenant that the general question of taxation was not before the electorate and that it was not a part of the manifesto. As the Hon'ble Finance Minister just now said, the Third Five Year Plan was discussed a year before the elections—as regards the whole plan of the country, and of the States as well. It was known what was the size of the Plan for the whole of India and of the States. It was known what were our resources and how much shortfall there would be and how to fill up the shortfall, what portion by external aid and how much from taxation. Everything was discussed threadbare both in the Parliament and in the State Assemblies. After all this if the Hon'ble Leader of the Opposition says that the people were never told that there would be taxation now, I am only sorry for the ignorance of the Hon'ble Leader of the Opposition.

About the amendment, itself, as far as my knowledge goes, since the last eighteen years in parliamentary life, it is not customary to circulate taxation Bills. Besides that, this Bill has been published ten or twelve days ago, and there has been enough time given to the public to consider. In fact they do write us in the matter and we take account of them. Therefore there is no reason why this has again to be sent for publication for elucidating public opinion.

Mr. SPEAKER.—I put the question to the vote of the House. The question is:

> "That the Mysore Stamp (Amendment) Bill, 1962, be circulated for the purpose of elucidating public opinion and

brought before the House on or before the 10th October 1962."

The motion was negatived.

Sri SANJEEVANATH AIKALA (Suratkal).—Sir, I raise a point of order. Can a member who is not a member of this House participate in the voice vote?

Sri M. V. KRISHNAPPA.—How does the Hon'ble Member know that the member participated in the big noise?

Sri C. J. MUCKANNAPPA.—Sir, we expect a ruling from the Chair.

(*Many Hon'ble Members began to speak.*)

Mr. SPEAKER.—A point has been noted and everyone thinks that he has to state something independently. Why should everyone try to reinforce his own ideas representing nothing new? I do not think there is anything to be said. It is not even done. A person, who is not a member of the Assembly and who has no right to vote, can never participate in voting.

Sri C. J. MUCKANNAPPA.—We could not follow what the Chair ruled.

Mr. SPEAKER.—His mind is so rapid...

Sri C. J. MUCKANNAPPA.—It is not rapid, Sir. It is as slow as possible. I want to catch the meaning.

Mr. SPEAKER.—I ruled that a person, who has not got a right to vote in this Assembly, will not be permitted to vote either by voice or in any other way whatsoever.

The Hon'ble Minister will kindly continue.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಈ ತೆರಿಗೆಗಳ ವಿಚಾರದಲ್ಲಿ ಮೂರು ನಾಲ್ಕು ದಿನಗಳಿಂದ ನಡೆದ ಚರ್ಚೆಯನ್ನು ನೋಡಿದರೆ, ತೆರಿಗೆಗಳನ್ನು ಹಾಕುವುದಕ್ಕೆ ನಮ್ಮ ವಿರೋಧ ಪಕ್ಷದವರ ವಿರೋಧವಿಲ್ಲ, ಆದರೆ ನ್ಯಾಯವಾಗಿ ತೆರಿಗೆ ಹಾಕಬೇಕು. ಸಾಮಾನ್ಯ ಬಡಜನರು, ಕೂಲಿಗಾರರು ಇಂಥವರ ಮೇಲೆ ತೆರಿಗೆ ಬೀಳಬಾರದು ಎಂಬುದು ಅವರ ವಾದ. ಮೂರನೆಯ ಯೋಜನೆಯಲ್ಲಿ ಸೇರಿರುವ ಕೆಲಸ ಕಾರ್ಯಗಳನ್ನು ಮುಗಿಸಬೇಕೆಂದು ಅವರ ಅಭಿಪ್ರಾಯವಾಗಿದೆ. ಎರಡನೆಯ ಯೋಜನೆಯಲ್ಲಿ ಉಳಿದಿರುವುದನ್ನು ಮುಗಿಸಬೇಕೆಂದು ಅವರಿಗೆ ಆಸೆಯಿದೆ. ಮೈಸೂರು ಯೋಜನೆಗೆ ಬೇಕಾದ 250 ಕೋಟಿ ರೂಪಾಯಿ ಒದಗಿಸುವುದರಲ್ಲಿ ಅವರ ಅಭಿಪ್ರಾಯದಲ್ಲಿ ವ್ಯತ್ಯಾಸವಿರುವಂತೆ ಕಾಣಲಿಲ್ಲ. ಆದರೆ ತೆರಿಗೆ ಹಾಕುವಾಗ ಬಡವರ ಮೇಲೆ, ಕೂಲಿಗಾರರ ಮೇಲೆ ಬೀಳಬಾರದೆಂಬುದು ಅವರ ಅಭಿಪ್ರಾಯವಾಗಿದೆ. ಈ ದೃಷ್ಟಿಯಿಂದ ಅವರ ವಿರೋಧ. ಬಡವರು ಮತ್ತು ಕೂಲಿಗಾರರ ಮೇಲೆ ಬೀಳದೇಯಿರುವ ತೆರಿಗೆಯೆಂದರೆ, ಅದು ಈ ಸ್ಟಾಂಪ್ ಡ್ಯೂಟಿ ಈಗ ಈ ಬಾಬಿನಿಂದ ಒಂದು ಕೋಟಿ ನಲವತ್ತು ಲಕ್ಷ ರೂಪಾಯಿ ವಸೂಲಾಗುತ್ತಿದೆ. ಯಾರು ಈ ತೆರಿಗೆ ಕೊಡುತ್ತಾರೋ ಅವರಿಗೆ ಯಾವ ಕಿರುಕುಳವೂ ಇಲ್ಲದೆ ಇದು ವಸೂಲಾಗುತ್ತಿದೆ. ಯಾರು ಆಸ್ತಿಯನ್ನು ಮಾರುವುದು, ವರ್ಗಮಾಡುವುದು, ಸಾಲ ಕೊಡುವುದು, ತೆಗೆದುಕೊಳ್ಳುವುದು ಇತ್ಯಾದಿ ಕಾರ್ಯಗಳಲ್ಲಿ ನಿರತರೋ ಅವರಿಗೆ ಮಾತ್ರ ಈ ತೆರಿಗೆ ಬೀಳುತ್ತದೆ. ಸಾಮಾನ್ಯ ಪ್ರಜೆಗಳು, ಕೇವಲ ಬಡವರು, ಕೂಲಿಗಾರರು ಮುಂತಾದವರಲ್ಲಿ ಯಾರು ಆಸ್ತಿಯನ್ನು ವರ್ಗ ಅಥವಾ ಮಾರಾಟ ಮಾಡದೇಯಿರುವವರ ಮೇಲೆ ಈ ತೆರಿಗೆ ಬೀಳುವುದಿಲ್ಲ. ಬಡವರು ಮತ್ತು ಕೂಲಿಗಾರರಲ್ಲಿ ಸುಮಾರು ಸೇಕಡ 12ರಷ್ಟು ಜನ ಮಾತ್ರ ಸಾಲ ತೆಗೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕೈಸಾಲ ತೆಗೆದುಕೊಳ್ಳುತ್ತಾರೆ. ಸಹಕಾರ ಸಂಘಗಳಲ್ಲಿ ತೆಗೆದುಕೊಳ್ಳುವವರು ಸೇಕಡ 12ರಷ್ಟು ಮಾತ್ರ. ಇನ್ನು 88 ಭಾಗ ಕೈಸಾಲ ತೆಗೆದುಕೊಳ್ಳುತ್ತಾರೆ ಎಂದು ರೂರಲ್ ಕ್ರೆಡಿಟ್ ಸರ್ವೆ ವರದಿಯಲ್ಲಿ ಓದಿದ ಜ್ಞಾಪಕವಿದೆ. ಅಲ್ಲಿ ನಂಬಿಕೆಯ ಮೇಲೆ ಸಾಲ ತೆಗೆದುಕೊಳ್ಳುತ್ತಾರೆ, ಕೊಡುತ್ತಾರೆ, ಕಲ್ಲುಮುಟ್ಟಿ ಸಾಕ್ಷಿಯ ಮೇಲೆ ಸಾಲ ತೆಗೆದುಕೊಳ್ಳುತ್ತಾರೆ. ಆದುದರಿಂದ ಈಗ ಹಾಕಬೇಕಾಗಿರುವ ತೆರಿಗೆಗಳಲ್ಲಿ ಹೆಚ್ಚು ಕಿರುಕುಳವಿಲ್ಲದೆ ಸುಲಭವಾಗಿ ವಸೂಲಾಗುವ ತೆರಿಗೆಯೆಂದರೆ, ಅದು ಸ್ಟ್ಯಾಂಪ್ ಡ್ಯೂಟಿ. ಈಗ ಇದರಿಂದ ಒಂದು ಕೋಟಿ ನಲವತ್ತು ಲಕ್ಷ ರೂಪಾಯಿ ವಸೂಲಾಗುತ್ತಿದೆ. ಇದನ್ನು ಇನ್ನೂ ಸೇಕಡ 50ರಷ್ಟು ಹೆಚ್ಚಿಸಿದರೆ ಇನ್ನು 70 ಲಕ್ಷ ರೂಪಾಯಿ ಯೋಜನೆಗಳಿಗಾಗಿ ಬರುತ್ತದೆ. ಮದರಾಸ್ ಸರ್ಕಾರದಲ್ಲಿದ್ದ ಈ ತೆರಿಗೆಯನ್ನು ಈಗಾಗಲೇ ಸೇಕಡ 50ರಷ್ಟು ಹೆಚ್ಚಿಸಿದ್ದಾರೆ. ಈ ರೀತಿಯ ವರಮಾನಗಳಿಂದ ಅವರು ಕುಂದಾ, ನೈವೇಲಿ ಯೋಜನೆಗಳನ್ನು ಕಟ್ಟುತ್ತಾ ಇರುವಾಗ ಮೈಸೂರು ಹಿಂದೆ ಬೀಳುವುದಕ್ಕಾಗುವುದಿಲ್ಲ. ನಾವೂ ಕೂಡ ಅವರ ಹಾಗೆ ಎಲ್ಲ ಯೋಜನೆಗಳನ್ನು ಕಾರ್ಯಗತ ಮಾಡುವುದು ನಮ್ಮ ಕರ್ತವ್ಯ. ಇದಕ್ಕೆ ಹಣವನ್ನೊದಗಿಸಲು ಸೇಕಡ 50ರಷ್ಟು ತೆರಿಗೆಯನ್ನು ಹೆಚ್ಚು ಮಾಡಬೇಕಾಗಿದೆ. ಇದು ವಿನಾ ಇದೇನೂ ಹೊಸದಲ್ಲ. ಈ ತಿದ್ದುಪಡಿ ಮಾಡಿರುವುದರಲ್ಲಿ ಮುಖ್ಯವಾಗಿ ಈ ಕಾನೂನನ್ನು ಜಾರಿ ಮಾಡುವುದರಲ್ಲಿ ಕಂಡು ಬಂದಿರುವ ಕೆಲವು ನ್ಯೂನತೆಗಳನ್ನು ನಿವಾರಣೆ ಮಾಡಲು ಪ್ರಯತ್ನ ಮಾಡಿದೆ. ಅನುಭವದಿಂದ ಕಂಡುಬಂದ ಕಷ್ಟಗಳ ನಿವಾರಿಸಲು ಪ್ರಯತ್ನ ಮಾಡಲಾಗಿದೆ. ಬಾರ್ ಕೌನ್ಸಿಲ್‌ಗೆ 250 ರೂಪಾಯಿ ಕೊಡಬೇಕಾಗಿರುವುದರಿಂದ ಸರ್ಟಿಫಿಕೇಟ್ ಆಫ್ ಎನ್‌ರೋಲ್‌ಮೆಂಟ್‌ಗೆ ಸ್ಟ್ಯಾಂಪ್ ಡ್ಯೂಟಿಯನ್ನು 250 ರೂಪಾಯಿಗೆ ನಿಗದಿ ಮಾಡಲಾಗಿದೆ. ಈ ಹಣ ಬಾರ್ ಕೌನ್ಸಿಲ್‌ಗೆ ಹೋಗುವುದರಿಂದ ಅವರಿಗೆ ಅನುಕೂಲವಾಗುತ್ತದೆ. ಇದರಿಂದ ಸರ್ಕಾರಕ್ಕೇನೂ ಮೊದಲಿಗಿಂತ ಹೆಚ್ಚು ಹಣ ಬರುವುದಿಲ್ಲ. ಇನ್ನು ಕೆಲವು ಕಷ್ಟಗಳು ಮೊದಲಿನ ಕಾನೂನಿನಲ್ಲಿದ್ದುದನ್ನು ನಿವಾರಣೆ ಮಾಡಲು ತಿದ್ದುಪಡಿ ತಂದಿದೆ. ಮತ್ತೆ ಕೆಲವು Consequential amendments ಆದುದರಿಂದ ಈ ಮಸೂದೆಯನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನಂಬಿದ್ದೇನೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಇದರಿಂದ ಎಷ್ಟು ಹೆಚ್ಚು ಹಣ ಸರ್ಕಾರಕ್ಕೆ ಬರುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—70 ಲಕ್ಷ ರೂಪಾಯಿ ಎಂದು ಹೇಳಿದೆ. ಈಗಿರುವ ಕಾನೂನಿನ ಮೇರೆಗೆ ಒಂದು ಕೋಟಿ ನಲವತ್ತು ಲಕ್ಷ ರೂಪಾಯಿ ವಸೂಲು ಆಗುತ್ತಿದೆ, ಇನ್ನುಮುಂದೆ ಈ ತಿದ್ದುಪಡಿ ಅಂಗೀಕಾರವಾದ ನಂತರ ಇನ್ನು 70 ಲಕ್ಷ ರೂಪಾಯಿ ಹೆಚ್ಚು ಬರುತ್ತದೆ ಎಂದು ಹೇಳಿದ್ದೇನೆ.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೆ, ಈಗತಾನೇ ಮಾನ್ಯ ರೆವಿನ್ಯೂ ಸಚಿವರು 1962ನೆಯ ಇಸವಿಯ ಸ್ಟ್ಯಾಂಪ್ ಡ್ಯೂಟಿ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಮೊದಲನೆಯ ತೆರಿಗೆ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಿದಾಗ, ಶ್ರೀಮಾನ್ ನಿಜಲಿಂಗಪ್ಪನವರ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ, ನಮ್ಮ ದೇಶದ ಜನತೆ ಅವರನ್ನು ಅಧಿಕಾರದ ಗದ್ದುಗೆಗೆ ಏರಿಸಿದ ಮೇಲೆ ಈ ತೆರಿಗೆಯ ಬಾಣಗಳನ್ನೆದುರಿಸಬೇಕಾಗುತ್ತದೆಂಬುದನ್ನು ಅರಿತಿರಲಿಲ್ಲವೆಂದು ಹೇಳಿದೆ. ಈಗ ಮೂರನೆಯ ಬಾಣವನ್ನು ಸ್ವೀಕಾರ ಮಾಡುತ್ತಿದ್ದೇವೆ. ಈಗತಾನೇ ರೆವಿನ್ಯೂ ಮಂತ್ರಿಗಳು ಒಂದು ವಿಷಯವನ್ನು ಹೇಳಿದರು. 1962ನೆಯ ಇಸವಿ ಫೆಬ್ರವರಿ ತಿಂಗಳಿನಲ್ಲಿ ನಡೆದ ಚುನಾವಣೆ ಕಾಲದಲ್ಲಿ ಯಾವ ಯಾವ ತೆರಿಗೆಗಳನ್ನು ಹಾಕುತ್ತೇವೆ ಎಂಬುದನ್ನು ಜನತೆಗೆ ಹೇಳಿದ್ದೇವೆಂದು ಹೇಳಿದರು. ಈ ವಿಚಾರದಲ್ಲಿ ರೆವಿನ್ಯೂ ಸಚಿವರು ನಿಜವನ್ನು ಹೇಳುತ್ತಿಲ್ಲವೆಂದು ನಾನಾದರೂ ಹೇಳುತ್ತೇನೆ. ಅವರು ಈ ರಾಜ್ಯದ ವಿಧಾನಸಭೆಗೆ ಚುನಾವಣೆಗೆ ನಿಂತಿರಲಿಲ್ಲ. ಅವರು ಲೋಕಸಭಾ ಚುನಾವಣೆ ಕ್ಷೇತ್ರದಿಂದ ಗೆದ್ದು ಬಂದು ಏನೋ ಕಾರಣಾಂತರದಿಂದ ಅಲ್ಲಿಗೆ ಹೋಗದೆ ಇಲ್ಲಿರಬೇಕೆಂಬ ಆಶಯದಿಂದ ಇಲ್ಲಿದ್ದಾರೆ. ಅವರನ್ನು ಒಂದು ಪ್ರಶ್ನೆ ಕೇಳುತ್ತೇನೆ. ಈಹೊತ್ತು ರೆವಿನ್ಯೂ ಸಚಿವರು ಚುನಾವಣೆಯಾಗಿರುವುದು ನಮ್ಮಿಂದ, ಎಂದರೆ, ವಿಧಾನಸಭಾ ಕ್ಷೇತ್ರದಿಂದ. ಅವರನ್ನು ಚುನಾಯಿಸಿದಾಗ ಅವರಿಂದ ಈ ರೀತಿ ತೆರಿಗೆ ಮಸೂದೆಗಳು ಬರುತ್ತವೆಂದು ಯಾರೂ ತಿಳಿದುಕೊಂಡಿರಲಿಲ್ಲ. ಅವರು ಯಾವ ಕ್ಷೇತ್ರದಿಂದ ಆರಿಸಿಬಂದಿದ್ದಾರೋ ಆ ಕ್ಷೇತ್ರದ ಸದಸ್ಯರು ಈ ತೆರಿಗೆಯ ಮಸೂದೆಗೆ ಬೆಂಬಲ ಕೊಟ್ಟಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ.

ಈ ದಿವಸ ದೇಶದಲ್ಲಿ ತೆರಿಗೆಗಳ ಪರಂಪರೆ ಜನತೆಯ ಮೇಲೆ ಒಂದಾದ ಮೇಲೆ ಒಂದರಂತೆ ಬಿದ್ದು ಜನರನ್ನು ಘೋರ ಸಂಕಟಕ್ಕೆ ಸಿಕ್ಕಿಸುವ ರೀತಿ ಸರ್ಕಾರ ಅವರ ಮೇಲೆ ತೆರಿಗೆಗಳ ಹೊರೆಯನ್ನು ಹೊರಿಸುತ್ತಿದೆ. ಮೈಸೂರು ದೇಶದ ಜನತೆ ತಾವು ಯಾವ ರೀತಿ ಸರಿಯಾದ ಜೀವನ ನಡೆಸುವುದು ಎಂಬ ಪರಿಸ್ಥಿತಿಯಲ್ಲಿರುವಾಗ ಅವರ ಮೇಲೆ ಸರ್ಕಾರ ಈ ರೀತಿ ತೆರಿಗೆಗಳ ಸುರಿಮಳೆಯನ್ನು ಸುರಿಸುವುದನ್ನು ನೋಡಿದರೆ ಚರಿತ್ರೆಯ ಮಹಮದ್ ಬಿನ್ ತೊಗಲಕ್‌ನ ಜ್ಞಾಪಕ ಬರುತ್ತದೆ. ಅವನ ಆಳ್ವಿಕೆಯಲ್ಲಿ ಖಜಾನೆಯಲ್ಲಿ ಹಣವಿಲ್ಲದೆ ರೂಪಾಯಿಗಳನ್ನು ಚರ್ಮದಲ್ಲಿ ಮಾಡಿಸಿದನಂತೆ. ಆದರೆ ಈ ಹೊತ್ತು ಚರ್ಮದಲ್ಲಿಯೂ ಅಲ್ಲದೆ ರೂಪಾಯಿಯನ್ನು ಕಾಗದದಲ್ಲಿ ಮುದ್ರಣ ಮಾಡಿ ಕೊಡುತ್ತಿದ್ದಾರೆ. ಎಂದರೆ ಪ್ರಜಾಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಹಣದ ಉಬ್ಬರ ಎಷ್ಟು ಹೆಚ್ಚಿದೆ, ಹಣದ ಬೆಲೆ ಎಷ್ಟು ಕಡಮೆಯಾಗಿದೆಯೆಂಬುದು ಗೊತ್ತಾಗುತ್ತದೆ. ಇಂಥ ಚಿಂತಾಜನಕವಾದ ಆರ್ಥಿಕ ಪರಿಸ್ಥಿತಿ ಇರುವಾಗ ನಮ್ಮ ಸರ್ಕಾರದವರು ಏಕೆ ಇಷ್ಟು ತೆರಿಗೆ ಮಸೂದೆಗಳನ್ನು ಪ್ರತಿಸಾರಿಯೂ ತರುತ್ತಿದ್ದಾರೋ ಅರ್ಥವಾಗುವುದಿಲ್ಲ. ಇಷ್ಟು ಅವಸರದಲ್ಲಿ ಸರ್ಕಾರವನ್ನು ನಡೆಸುವ ಜನರು ನಮ್ಮಮೇಲೆ ಹತೋಟಿಯನ್ನು ಇಟ್ಟುಕೊಳ್ಳಲು ಶಕ್ತಿಯಿಲ್ಲವಿದ್ದರೆ ಜನತೆಯ ಮುಂದೆ ಹೋಗಿ ತೆರಿಗೆ ಕೊಡಿ, ದೇಶದ ಅಭಿವೃದ್ಧಿ ಕಾರ್ಯ ಮಾಡಬೇಕಾಗಿದೆ, ಅದಕ್ಕೆ ಹಣ ಬೇಕು ಎಂದು ಕೇಳಲಿ.

2-30 P.M.

ಈಹೊತ್ತು ನಿಮಗೆ ಸುಮಾರು 100 ಕೋಟಿ ರೂಪಾಯಿಗಳ ಆದಾಯ ಕೊಡುತ್ತಿರುವ ಜನತೆ ನಿಮ್ಮನ್ನು ಕೇಳುತ್ತಿದೆ, ನಿಮಗೆ ಕೊಡುತ್ತಿರುವ ಹಣವನ್ನು ನೀವು ಯಾವರೀತಿ ಖರ್ಚುಮಾಡುತ್ತಿದ್ದೀರಿ ಎಂದು. ದೇಶದ ಜನತೆ ಹಾಕಿರುವ ಈ ಸವಾಲನ್ನು ಅನೇಕರು ಈ ಸಭೆಯಲ್ಲಿ ತಮ್ಮನ್ನು ಕೇಳಿದ್ದಾರೆ. ಆದರೆ ಸರ್ಕಾರದವರು ಮಾಡಿರತಕ್ಕ ಕೆಲಸಕಾರ್ಯಗಳನ್ನು ಅನುಸರಿಸಿರತಕ್ಕ ರೀತಿ ನೀತಿಗಳನ್ನು ಕೇಳಿ ಇಂದು ಜನತೆಗೆ ನಿಮ್ಮಲ್ಲಿ ನಂಬಿಕೆ ಹೋಗಿದೆ. ಅವರು ಕೊಟ್ಟ ದುಡ್ಡು ಸಾಕಷ್ಟು ಪರಿಣಾಮಕಾರಿಯಾದ ರೀತಿಯಲ್ಲಿ ಖರ್ಚಾಗುತ್ತಿಲ್ಲ. ಯಾವ ಕೆಲಸಕ್ಕಾಗಿ ಕೊಟ್ಟಿತ್ತೊ ಅದಕ್ಕಾಗಿ ಖರ್ಚಾಗಿಲ್ಲ. ಬೇರೆ ದಾರಿಯಲ್ಲಿ ಹೋಗುತ್ತಿದೆ. ಇದನ್ನು ಅನೇಕ ವಾದಗಳ ರೂಪದಲ್ಲಿ ಸರ್ಕಾರದ ಮುಂದೆ ಜನತೆ ಇಟ್ಟಿದೆ. ಇದಕ್ಕೆ ಒಂದಲ್ಲ, ನೂರಾರು ಉದಾಹರಣೆಗಳನ್ನು ಕೊಡುವುದಕ್ಕೆ ನಾನು ತಯಾರಾಗಿದ್ದೇನೆ. ನನಗಿಂತ ಹೆಚ್ಚಿಗೆ, ನಿಮ್ಮಿಂದಲೇ ನಿರೂಪಿಸಲ್ಪಟ್ಟಿರುವ ಆಡಿಟರುಗಳು, ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಈ ಅಂಶವನ್ನು ತಮ್ಮ ಮುಂದಿಟ್ಟಿದ್ದಾರೆ. ಕೋಟ್ಯಾಂತರ ರೂಪಾಯಿಗಳು ನಿರರ್ಥಕವಾಗಿ ಖರ್ಚಾಗಿವೆ, ಲೆಕ್ಕವಿಲ್ಲದೆ ಖರ್ಚಾಗಿವೆ, ಯಾವುದಕ್ಕೆ ಖರ್ಚಾಗಬೇಕೋ ಅದಕ್ಕೆ ಖರ್ಚಾಗಿಲ್ಲವೆಂದು, ಲೋಪದೋಷಗಳ ನೂರಾರು ಪಟ್ಟಿ ಮಾಡಿ ವರದಿಯ ರೂಪದಲ್ಲಿ ತಮ್ಮ ಮುಂದಿಟ್ಟಿದ್ದಾರೆ. ಆಡಿಟರ ದೃಷ್ಟಿಯಲ್ಲೇ ಇಷ್ಟು ತಪ್ಪುಗಳಿದ್ದ ಮೇಲೆ, ಅದಕ್ಕಿಂತಲೂ ಹೆಚ್ಚಾಗಿ ಜನತೆಯ ಮುಂದೆ ಎಷ್ಟು ತಪ್ಪುಗಳನ್ನು ನೀವು ಎಸಗಿರಬಹುದು ? ಈಹೊತ್ತಿನ ದಿವಸ ಸರ್ಕಾರದ ಆರ್ಥಿಕ ಬುಟ್ಟಿ ಯಾವರೀತಿಯಿದೆಯೆಂದರೆ, ಅದೊಂದು ತೂತಿನ ಮಡಕೆಯಂತೆ ಇದೆ. ರೈತನು ಕಷ್ಟಪಟ್ಟು ತಂದುತಂದು ಅದರೊಳಕ್ಕೆ ಹಾಲು ತುಂಬುತ್ತಿದ್ದಾನೆ. ಆದರೆ ಅದು ತೂತು ! ಎಷ್ಟು ಕಂದಾಯ ಕೊಟ್ಟರೂ ಆ ತೂತು ಮಡಕೆಯಲ್ಲಿ ಏನು ಉಳಿದಿರುತ್ತದೆ ? ಆತ ನಿತ್ಯವೂ ದುಡಿದು ದುಡಿದು ನಮ್ಮ ದೇಶದ ಭವಿಷ್ಯ ಭವ್ಯವಾಗುತ್ತದೆಂದು ನಿಮಗೆ ಕೊಟ್ಟರೆ, ದೇಶಕ್ಕೆ ಕಲ್ಯಾಣವಾಗುತ್ತದೆಂದು ದೇಶದ ಬೊಕ್ಕಸಕ್ಕೆ ಹಣ ಕಟ್ಟಿದರೆ, ಈ ಕಾಂಗ್ರೆಸ್ ಸರ್ಕಾರ ಬಂದಮೇಲೆ ಈ 16 ವರ್ಷಗಳ ಕಾಲದಲ್ಲಿ ವರ್ಷಗಳು ಉರುಳಿದಂತೆಲ್ಲಾ ಇನ್ನು ಹೆಚ್ಚು ಹೆಚ್ಚು ಕಂದಾಯ ಹೇರುತ್ತಿದೆ. ಬಡಜನತೆ ಇಂದು ಈ ಹೊರೆಯಿಂದ ಒದ್ದಾಡುತ್ತಿದೆ. ಅವರ ಮೇಲ್ಮೆಯನ್ನು ಎಷ್ಟುಮಾತ್ರವೂ ಸಾಧಿಸಿಲ್ಲ. ಬರೀ ದೊಡ್ಡ ದೊಡ್ಡ ರಿಪೋರ್ಟ್‌ಗಳನ್ನು ಕೊಡುವುದರಲ್ಲಾಯಿತೇ ಹೊರತು, ಮೊದಲನೆಯ ಪಾಂಚವಾರ್ಷಿಕ ಯೋಜನೆ, ಎರಡನೆಯ ಪಾಂಚವಾರ್ಷಿಕ ಯೋಜನೆ, ಮೂರನೆಯ ಪಾಂಚವಾರ್ಷಿಕ ಯೋಜನೆ ಮಾಡುತ್ತೇವೆ, ಸಹಸ್ರಾರು ರೂಪಾಯಿಗಳನ್ನು ಖರ್ಚುಮಾಡುತ್ತೇವೆ, ಅದಕ್ಕಾಗಿ ದುಡ್ಡು ಕೊಡಿ ಎಂದು ಮತ್ತೆ ಮತ್ತೆ ಕೇಳುತ್ತಿದ್ದೀರೇ ಹೊರತು ಆ ಬಡರೈತನನ್ನು ಉದ್ಧಾರ ಮಾಡಿಲ್ಲ. ನಾನು ಅನೇಕ

ಸಾರಿ ಹೇಳಿರುವಂತೆ ನೀವು ಆಕಾಶಕ್ಕೆ ಏಣಿ ಹಾಕುತ್ತಿದ್ದೀರಿ. ಹಾಸಿಗೆಯಿದ್ದಷ್ಟು ಕಾಲುಚಾಚು ಎಂಬಂತೆ, ದೇಶದ ಆರ್ಥಿಕ ಪರಿಸ್ಥಿತಿಯನ್ನು ನೋಡಿ ಎಷ್ಟರ ಮಟ್ಟಿಗೆ ಯೋಜನೆಗಳನ್ನು ಕಾರ್ಯಗತ ಮಾಡಬಹುದೆಂಬುದನ್ನು ನೀವು ಯೋಚನೆ ಮಾಡದೆ ಕೇವಲ ಕಾಗದದ ಮೇಲೆ ಮಹಾಮಹಾ ಯೋಜನೆಗಳನ್ನು ತಯಾರು ಮಾಡುತ್ತೀರಿ. ಇಂಥಾ ಯೋಜನೆಗಳನ್ನು ಹಾಕಿದ್ದರಿಂದ ದೇಶದ ಜನತೆಗೆ ಏನೂ ಪ್ರಯೋಜನ ಲಭಿಸುವುದಿಲ್ಲ. ಇವುಗಳಿಂದಾಗಿ ಇಂದು ದೇಶದ ಜನತೆ ಜೀವನ ನಡೆಸುವುದೇ ಕಷ್ಟವಾಗಿದೆ. ಜೀವನದ ವೆಚ್ಚ ದಿನೇದಿನೇ ಜಾಸ್ತಿಯಾಗುತ್ತಿದೆ. ತಿಂಗಳಿಗೆ ನೂರು ರೂಪಾಯಿ ಆದಾಯ ಬರುವ ಮನುಷ್ಯನೂ ಕೂಡ ಜೀವನ ಮಾಡುವುದಕ್ಕೆ ಅವಕಾಶವಿಲ್ಲ. ಬೆಲೆಗಳ ಏರಿಕೆಗೆ ತಡೆಬಡೆಯಿಲ್ಲ. ಇಂಥಹ ಸ್ಥಿತಿಯಲ್ಲಿ ಇನ್ನೂ ಎಷ್ಟೋ ತೆರಿಗೆಗಳನ್ನೂ ತರುವವರಾಗಿದ್ದೀರಿ. ಅವುಗಳನ್ನು ತರುವ ಮುನ್ನ, ಅವುಗಳ ಪರಿಣಾಮವಾಗಿ ಜೀವನದ ವೆಚ್ಚ ಎಷ್ಟರಮಟ್ಟಿಗೆ ಜಾಸ್ತಿಯಾಗುತ್ತದೆಂದು ಪರೀಕ್ಷೆ ಮಾಡಿನೋಡಿದ್ದೀರಿ. ಇದಕ್ಕೆ ಆರ್ಥಿಕ ಮಂತ್ರಿಗಳನ್ನು ಕೇಳಿದರೆ, ಅವರ ಹತ್ತಿರ ಅಂಕಿ ಅಂಶಗಳೇ ಇಲ್ಲ! ಸುಮ್ಮನೆ ನಿಮಗೆ ದುಡ್ಡುಬೇಕು ಎಂದು ಹೇಳಿ ಶಾಸನ ತಯಾರಿಕೆಯ ಇಲಾಖೆಯಿಂದ ಮಾಡಿಸಿ ತಂದು ನಮ್ಮ ಮುಂದಿಡುತ್ತಿದ್ದೀರಿ. ಯಾವ ವರ್ಗದ ಮೇಲೆ ಇವುಗಳ ಹೊರೆ ಬೀಳುತ್ತದೋ ಅದಕ್ಕೆ ಇದನ್ನು ಹೊರುವ ಶಕ್ತಿಯಿದೆಯೋ ಇಲ್ಲವೇ ಎಂಬುದನ್ನು ಶಾಸ್ತ್ರೀಯವಾಗಿ ಅಳತೆ ಮಾಡುವ ವ್ಯವಸ್ಥೆ ನಿಮ್ಮಲ್ಲಿದೆಯೇ? ಇಲ್ಲ! ಹೀಗಿರುವಾಗ ಯಾವ ನೀತಿಯ ಮೇಲೆ, ದೇಶದ ಮುಂದೆ ಹೋಗಿ ನಿಮಗಿಷ್ಟು ಕೋಟಿ ರೂಪಾಯಿಗಳು ಬೇಕೆಂದು ಕೇಳುತ್ತೀರಿ. ಇದು ಯಾವ ಧರ್ಮ? ಬರೀ 42 ಕೋಟಿ ರೂಪಾಯಿಗಳು ಬೇಕಾಗಿದೆ, ಎ. ಜಿ. ರಾಮಚಂದ್ರರಾಯರ ಕಮಿಟಿ ಈ ರೀತಿ ಶಿಫಾರಸ್ಸು ಮಾಡಿದೆಯೆಂದು ಹೇಳಿ ಈಗ ಮೂರು ದಿವಸಗಳಿಗೆ ಮೂರು ಬಿಲ್ಲುಗಳನ್ನು ತಂದು ಬೇರೊಂದು ಸಮಜಾಯಿಷಿಯನ್ನೂ ಕೊಡದೆ, ಹಣ ಕೊಡಿ ಎಂದು ಕೇಳುತ್ತಿದ್ದೀರಲ್ಲಾ......

ಶ್ರೀ ಎಂ. ವಿ. ಕೃಷ್ಣಪ್ಪ.—ನೀವು ಈ ಬಿಲ್ಲನ್ನು ನೋಡಿಲ್ಲ. ಎ. ಜಿ. ರಾಮಚಂದ್ರರಾಯರ ಶಿಫಾರಸ್ಸಿನ ಮೇಲೆ ಇದನ್ನು ತಂದಿದೆಯೆಂದು ಎಲ್ಲಿ ಹೇಳಿದೆ?

ಶ್ರೀ ಎಸ್. ಶಿವಪ್ಪ.—ನೀವು ಬರೀ 42 ಕೋಟಿ ರೂಪಾಯಿಗಳು ಬೇಕಾಗಿವೆ. ಅದಕ್ಕಾಗಿ ಇದನ್ನು ತಂದಿದ್ದೇವೆಂದು ಹೇಳಿದ್ದೀರಲ್ಲಾ! ಅದರಲ್ಲೂ ಶ್ರೀ ಎಂ. ವಿ. ಕೃಷ್ಣಪ್ಪನವರು ಹೇಳಿದ ಒಂದು ಮಾತು ಬಹಳ ಚೆನ್ನಾಗಿದೆ!! 'ಇದು ಬಡವರ ಮೇಲೆ ಬೀಳುವುದಿಲ್ಲ. ಯಾರಿಗೂ ಕಾಣದಂತೆ ಗುಪ್ತಗಾಮಿನಿಯಾಗಿದೆ' ಎಂದು ಹೇಳಿದರು. ಅದು ನಿಜ. ಯಾರಿಗೂ ಪತ್ತೆಯೇ ಆಗುವುದಿಲ್ಲ, ಅದು ಅವರನ್ನು ಯಾವ ರೀತಿ ಶೋಷಿಸುತ್ತದೆ ಎಂದು. ಕೋಲಾರದ ನದಿಗಳು ಅನೇಕವು ಗುಪ್ತಗಾಮಿನಿಗಳು—ಅದರೂ ಆ ಗುಪ್ತಗಾಮಿನಿಯಿಂದ ಸಹಸ್ರಾರು ಎಕರೆಗಳು ವ್ಯವಸಾಯಗೊಂಡು ಸಂಪತ್ತು ತರುತ್ತವೆ. ಹಾಗೆಯೇ ಈ ಹಣಕಾಸಿನ ಮಸೂದೆ ಗುಪ್ತಗಾಮಿನಿಯಾಗಿ ಎಲ್ಲರನ್ನೂ ಆವರಿಸಿಕೊಳ್ಳುತ್ತಿದೆ.

ಆದ್ದರಿಂದ ಮುಖ್ಯವಾಗಿ, ಅದರಲ್ಲೂ ರೆವಿನ್ಯೂ ಸಚಿವರಿಗೆ ಹೇಳುತ್ತೇನೆ. ತಾವು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ತಾವು ರೈತರ ಕುಟುಂಬದಲ್ಲಿ ಬೆಳೆದವರು. ರೈತ ಕುಟುಂಬದಿಂದ ಬಂದವನಾಗಿದ್ದೇನೆಂದು ಹೆಮ್ಮೆ ಪಟ್ಟುಕೊಂಡು ಅನೇಕ ವೇದಿಕೆಗಳ ಮೇಲಿಂದ ಹೇಳಿದ್ದೀರಿ. ಈ ಹೊತ್ತು ಯಮುನಾ ನದಿಯ ನೀರು ಕುಡಿದು ಬಂದ ಮೇಲೆ ಆ ಹೆಮ್ಮೆಯೆಲ್ಲಿ? ನೀವು ಹುಟ್ಟಿ ಬೆಳೆದ ಹಳ್ಳಿಯ ರೈತರನ್ನು ಎಷ್ಟರಮಟ್ಟಿಗೆ ಉದ್ಧಾರ ಮಾಡುತ್ತಿದ್ದೀರೆಂಬುದನ್ನು ನೀವೇ ಯೋಚನೆ ಮಾಡಿ. ರೈತರ ಮಕ್ಕಳಾದ ನೀವು ಇಂಥ ಬಿಲ್ಲನ್ನು ಈ ಶಾಸನಸಭೆಯ ಮುಂದೆ ಇಡಬಾರದಾಗಿತ್ತು. ರೈತರ ಕಷ್ಟಸುಖಗಳನ್ನು ನೋಡಿಬಂದಿದ್ದೇವೆಂದು ಹೇಳುವವರು ಈ ಬಿಲ್ಲನ್ನು ತರುವುದೇ. ಅವರು ಈ ಮಸೂದೆಯಿಂದ 70 ಲಕ್ಷ ರೂಪಾಯಿಗಳು ಬರುತ್ತದೆಂದು ಹೇಳಿದ್ದಾರೆ. ಆದರೆ ವಾಸ್ತವವಾಗಿ ಕಾರ್ಯಾಚರಣೆಗೆ ತಂದಾಗ ಏನಿಲ್ಲವೆಂದರೂ ಒಂದು ಕೋಟಿ ರೂಪಾಯಿ ಬರುವುದರಲ್ಲಿ ಸಂದೇಹವಿಲ್ಲ. ಈ ಪ್ರಕಾರ ಒಂದೇ ದಿವಸದಲ್ಲಿ ಒಂದು ಕೋಟಿ ರೂಪಾಯಿಗಳ ಹೊರೆಯನು ಜನತೆಯ ಮೇಲೆ ಹೊರ ಹೊರಟಿದ್ದೀರಲ್ಲಾ. ನಿನ್ನೆ ಮೊನ್ನೆ ಮಂಡಿಸಿದ ಎರಡು ಮಸೂದೆಗಳಿಂದ ಇನ್ನೊಂದ ಕೋಟಿ ಬರುತ್ತದೆಂದಿಟ್ಟುಕೊಂಡರೆ, ಎರಡೇ ದಿವಸದಲ್ಲಿ ಎರಡು ಕೋಟಿ ರೂಪಾಯಿಗಳನ್ನು ಜನತೆಯ ಮೇಲೆ ಹೇರುವ ಪ್ರಯತ್ನಮಾಡಿದ್ದೀರಿ ಹೀಗೆ ಆತುರ ಆತುರವಾಗಿ ಎರಡು ದಿವಸಕ್ಕೆ ಎರಡು ಕೋಟಿ ರೂಪಾಯಿಗಳನ್ನು ಹೇರುವುದೆಂದರೇನು ಬಡತನ ತುಂಬಿತುಳುಕುವ ದೇಶದಲ್ಲಿ ಜನತೆ ಬೆಲೆ ಏರುಪೇರುಗಳ ಸಂಕಷ್ಟಕ್ಕೆ ಸಿಕ್ಕಿ ತಪಿಸುತ್ತಿರುವ ಸಮಯದಲ್ಲಿ ಎರಡು ದಿವಸಗಳಲ್ಲಿ ಎರಡು ಕೋಟಿ ರೂಪಾಯಿಗಳ ಕರವನ್ನು ಹೇರುವ ಮಸೂದೆಗಳನ್ನು ಮಂಜೂರು ಮಾಡಿಸಿಕೊಂಡು ತೆರಿಗೆ ಹೊರಸುವ ಪ್ರಯತ್ನ, ಸಾಹಸವಿದೆಯಲ್ಲಾ ಇದು 'ಹುಚ್ಚು' ಸಾಹಸವೆಂದು ಹೇಳದೆ ವಿಧಿಯಿಲ್ಲ. ತಾವು ದಯವಿಟ್ಟು ವಿರೋಧ ಪಕ್ಷದವರ ಮಾತಿಗೆ ಬೆಲೆಕೊಟ್ಟು ಸ್ವಲ್ಪ ಸಾವಧಾನ ತೆಗೆದುಕೊಂಡು, ದೇಶದ ಜನತೆಯ ಪ್ರತಿಕ್ರಿಯೆಯೇನಿದೆಯೆಂಬದನ್ನು ನೋಡುವುದು ನ್ಯಾಯ ಮತ್ತು ಧರ್ಮ. ಇದು ಪ್ರಜಾಧರ್ಮ; ಸರ್ಕಾರದ ಧರ್ಮ; ತಮ್ಮ ಅರ್ಥಿಕ ನೀತಿಯ ಮೂಲ ನಿಯಮ ಎಂದು ನಾನು ನಿವೇದಿಸಿಕೊಳ್ಳುತ್ತೇನೆ. ಹೇಗೂ ತಮ್ಮ ಜನ ಬಹುಮತದಲ್ಲಿ 139 ಜನರಿದ್ದಾರೆಂದು ತಿಳಿದು ಏನೇ ಆಗಲಿ, ಜನ ಒಪ್ಪಲಿ ಒಪ್ಪದಿರಲಿ ಇದನ್ನು Act ಮಾಡಿಯೇ ಮಾಡುತ್ತೇವೆಂದು ಹೊರಟಿರುವ ನಿಮ್ಮ ಕಾರ್ಯದಿಂದ ಖಂಡಿತವಾಗಿ ದೇಶದಲ್ಲಿ ದುಷ್ಪರಿಣಾಮವುಂಟಾಗುತ್ತದೆ. ದೇಶದಲ್ಲಿ ಒಂದು ಘೋರವಾದ ಪ್ರಚೋದನೆಗೆ ತಾವು ಅವಕಾಶ ಮಾಡುತ್ತಿದ್ದೀರಿ. ನಾನು ಬಹುಶಃ ಎಚ್ಚರಿಕೆ ಕೊಡಬಲ್ಲೆ. ಪ್ರಜಾಪ್ರಭುತ್ವದ ಅಡಿಗಲ್ಲಿಗೇ ದೊಡ್ಡ ಕೊಡಲಿ ಪೆಟ್ಟನ್ನು ಈ ಮಸೂದೆ ತಂದೀತು. ಒಂದೇ ಒಂದು ಸಾರಿಗೆ ದೇಶದ ಮುಂದೆ 7 ತೆರಿಗೆಗಳನ್ನು ತಂದಿಟ್ಟು ಏಳೇ ದಿದಸಗಳಲ್ಲಿ ಅವುಗಳನ್ನು ಪಾಸು ಮಾಡಿಸಿಕೊಂಡು ದೇಶದ ಜನತೆಯ ಮೇಲೆ ಹಾಕುತ್ತೇವೆಂದು ತಾವು ಹೇಳುತ್ತಿದ್ದೀರಲ್ಲಾ, ಈ ಹುಚ್ಚು ಸಾಹಸಕ್ಕೆ ನಾನೇನು ಹೇಳಲಿ!

ನಾವು ದೇಶದ ಜನತೆಯ ಪ್ರತಿನಿಧಿಗಳಾಗಿ ಬಂದಿರತಕ್ಕಂಥವರು ಇಲ್ಲಿ. ಈ ತೆರಿಗೆಯನ್ನು ಹಾಕಿದರೆ ನಮ್ಮ ನಮ್ಮ ಕ್ಷೇತ್ರದಲ್ಲಿ ಜನತೆ ಏನು ಅಂದುಕೊಂಡಾರು. ಅವರನ್ನು ಕೇಳಿ, "ಸಂತೋಷ, ಪರವಾಗಿಲ್ಲ ತೆರಿಗೆ ಹಾಕಿ ಎಂದು ಹೇಳಿದರೆ ಹಾಕಿ; ನಿಮ್ಮ ನಿಮ್ಮ ಕ್ಷೇತ್ರಗಳಿಗೆ ಹೋಗಿ ಜನರನ್ನು ಈ ವಿಷಯದಲ್ಲಿ ಕೇಳಿ. ಶ್ರೀಮಾನ್ ಕೃಷ್ಣಪ್ಪನವರು ಯಾವ ಕ್ಷೇತ್ರದಿಂದ ಚುನಾಯಿತರಾಗಿ ಬಂದಿದ್ದಾರೆಯೋ, ಆ ಕ್ಷೇತ್ರದಲ್ಲಿ ಹೋಗಿ ಬಹಿರಂಗ ಸಭೆ ನಡೆಸಲಿ, ಇವತ್ತಿನ

(ಶ್ರೀ ಎಸ್. ಶಿವಪ್ಪ)

ದಿವಸ ಇಲ್ಲಿರತಕ್ಕಂಥ ಮಸೂದೆಗಳಿಗೆ ಜನತೆಯಿಂದ "ಸೈ" ಅನಿಸಿಕೊಂಡ ಬಂದರೆ, ಶಾಸನ ಸಭೆಗೆ ರಾಜೀನಾಮೆ ಕೊಡುವುದಕ್ಕೆ ಸಿದ್ಧನಿದ್ದೇನೆ. ಇದನ್ನು ಬಹಿರಂಗವಾಗಿ ಹೇಳುತ್ತೇನೆ. ಯಾವ ಕ್ಷೇತ್ರಕ್ಕೇ ಹೋಗಿ, ಬಹಿರಂಗ ಸಭೆಗಳನ್ನು ಏರ್ಪಡಿಸಿ, ಶಾಸನ ಸಭೆಗಳ ಮುಂದಿರತಕ್ಕ ಈ ಏಳು ಮಸೂದೆಗಳನ್ನೂ ಸಭೆಯ ಮುಂದಿಟ್ಟು, ಅದರಲ್ಲಿ 'ಸೈ' ಏನಿಸಿಕೊಂಡು ಬಂದರೆ, ಒಪ್ಪಿಗೆಯನ್ನು ಪಡೆದರೆ ಅದು ಪ್ರಜಾ ಪ್ರಭುತ್ವದ ಮಾರ್ಗ, ಲಕ್ಷಣ ಅದು ಪ್ರಭುತ್ವದ ಅಡಿಗಲ್ಲು; ಪ್ರಜಾಪ್ರಭುತ್ವದ ಅಭಿಪ್ರಾಯಕ್ಕೆ ತಲೆ ಬಾಗಿ ಮನ್ನಣೆಕೊಡಬೇಕು. ಇವತ್ತಿನದಿವಸ ನಾನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಇವತ್ತು ಜನತೆ ಈ ತೆರಿಗೆ ಹೊರೆಯನ್ನು ಹೊರುವುದಕ್ಕೆ ಬಹಳ ಬೇಜಾರಾಗಿದ್ದಾರೆ. "ಎಷ್ಟು ದುಡ್ಡು ಕೊಟ್ಟರೂ ಏನು, ಹಣದ ಹೊಳೆ ನನ್ನ ಊರಿಗೇ ಬರಲಿಲ್ಲ. ಕಂದಾಯ ಕೊಡುವುದಕ್ಕೆ ಮಾತ್ರ ನಾನು ಹುಟ್ಟಿರುವುದು. ಕೋಟಿ ಕೋಟಿ ರೂಪಾಯಿ ಹಣವನ್ನು ಕೊಟ್ಟರೂ, ಅದರ ಪ್ರತಿಫಲ ಸಾಕಷ್ಟು ಪ್ರಮಾಣದಲ್ಲಿ ನನ್ನ ಹಳ್ಳಿಗೆ ಬರಲಿಲ್ಲ" ಎಂದು ರೈತ ಹೇಳುತ್ತಿದ್ದಾನೆ. ಯಾವ ಹಳ್ಳಿಗೇ ಹೋಗಿ ನೋಡಿ, ಜನ ಹಾಗೆ ಹೇಳುತ್ತಿದ್ದಾರೆ. ವೋಟಿಂಗ್ ಕಾಲದಲ್ಲಿ ಜತ್ತಿಯವರು ಹೇಳಿದರು. 1961ನೇ ಇಸವಿಯಲ್ಲಿ ಕೂಡ ಮೂರನೇ ಪಾಂಚವಾರ್ಷಿಕ ಕರಡು ಮಸೂದೆಯನ್ನು ಈ ಸಭೆಯಲ್ಲಿ ಇಟ್ಟಾಗ, ಸಭೆಯ ಗಮನಕ್ಕೆ ತೆರಿಗೆ ಮೂಲಕ ಎಷ್ಟು ಬೇಕಾಗುತ್ತದೆನ್ನುವುದನ್ನು ತಂದಾಗ ಅದರೊಳಗೇ ಸಭೆ ಗಮನಕೊಟ್ಟರೆ; ಇಡೀದೇಶ ಒಪ್ಪಿಗೆ ಕೊಟ್ಟಿದೆ ಎಂದು ನಾಲ್ಕು ಮಾತಿನಲ್ಲಿ ಹೇಳಿದರು. ಜಂಖಂಡಿಯಲ್ಲಿ ಎಷ್ಟು ಭಾಷಣಗಳಲ್ಲಿ ಜತ್ತಿಯವರು ಜನತೆಯ ಮುಂದೆ ಈ ವಿಚಾರವನ್ನು ಹೇಳಿದರು. 42 ಕೋಟಿ ರೂಪಾಯಿ ಜನತೆಯ ಕಡೆಯಿಂದ ಬೇಕು ಎಂದು ಜತ್ತಿಯವರು ಆ ಭಾಷಣಗಳಲ್ಲಿ ಹೇಳಿದ್ದರೆ ಸೈ ಅನ್ನುತ್ತಿದೆ. ಮೂಗುಮ್ಮಾಗಿ ಸೇರಿಸಿ ದೇಶದ ಜನತೆ ಒಪ್ಪಿಗೆ ಕೊಟ್ಟಿದೆ ಎಂದು ಹೇಳಿ ಬಿಟ್ಟರು. ಅವರಿಗೆ ದುಡ್ಡು ಬೇಕು ಎಂದು ಹೇಳಲಿ; ಆದರೆ ಜನತೆಯ ಹೆಸರನ್ನು, ಪ್ರಜೆಗಳ ಹೆಸರನ್ನು ತಂದು ಅವರು ಒಪ್ಪಿದ್ದಾರೆಂದು ಹೇಳತಕ್ಕಂಥಾದ್ದು ಖಂಡಿತವಾಗಿಯೇ ಮೋಸವೆಂದು ಹೇಳುತ್ತೇನೆ. ಅವರ ಹೆಸರನ್ನು ಇಲ್ಲಿ ಇಷ್ಟು ಹಗುರವಾಗಿ ತರುವುದು ಒಳ್ಳೆಯದಲ್ಲ. ತಮ್ಮಲ್ಲಿ ಒಂದು ಮಾತಿನಿಂದ ಎಚ್ಚರಿಕೆ ಕೊಡುಬೇಕಾಗಿದೆ. ಈ ರೀತಿಯಾಗಿ ತಾವು ದೇಶದ ಮೇಲೆ ತೆರಿಗೆ ಸುರಿಮಳೆಯನ್ನು ಜನಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಹಾಕಿದರೆ ದೇಶದಲ್ಲಿ ದೊಡ್ಡ ಅನಾಹುತವಾಗಿ, ಜನತೆ ಕ್ರಾಂತಿಯಿಂದ ದಂಗೆ ಎದ್ದು, ಪ್ರಜಾಪ್ರಭುತ್ವದ ಅಡಿಗಲ್ಲು ಹಾಳಾಗಿ ಹೋದೀತು. ನಿಮ್ಮ ತೆರಿಗೆ ವಿಚಾರ ಜನರ ಮನಸ್ಸನ್ನು ಒಳ ಹೊಕ್ಕಿಲ್ಲ. ಜನರಿಗೆ ನೀವು ಹೇಳಿ: "ಇಷ್ಟು ತೆರಿಗೆಯಿಂದ ನಿಮ್ಮ ಜೀವನ ವೆಚ್ಚ ಹೆಚ್ಚಾಗುತ್ತದೆಂದು ಬಿಡಿಸಿ ಬಿಡಿಸಿ ಪತ್ರಿಕೆಗಳ ಮೂಲಕ ಪ್ರಚಾರ ಮಾಡಿ. ಶೇಕಡ 80ರಷ್ಟು ಅವಿದ್ಯಾವಂತರು ಇರತಕ್ಕಂಥ ನಮ್ಮ ದೇಶದಲ್ಲಿ ತಾವು ಜನರೆಲ್ಲರ ಅಭಿಪ್ರಾಯ, ಒಪ್ಪಿಗೆ "ನಮಗೆ" ಇದೆಯೆಂದು ತಾವು ಹೇಳತಕ್ಕಂಥದ್ದು ಸರಿಯಲ್ಲವೆಂದು ಮತ್ತೊಂದು ಸಾರಿ ಹೇಳುತ್ತೇನೆ.

ಅನೇಕ ರಾಜಕೀಯ ಪಕ್ಷಗಳು ಮೂರನೆಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಹಾಕತಕ್ಕಂಥ ತೆರಿಗೆಗಳ ವಿಚಾರದಲ್ಲಿ ಬಹಳ ಆಳವಾಗಿ ವಿಚಾರಮಾಡುತ್ತೇವೆ. ಅನೇಕ ರಾಜಕೀಯ ಪಕ್ಷಗಳು ಈ ತೆರಿಗೆ ಇಷ್ಟು ಘೋರರೂಪದಲ್ಲಿ ಪ್ರಜೆಗಳ ಮೇಲೆ ಒಂದೇ ಕಾಲಕ್ಕೆ ಬಿದ್ದರೆ, ಆ ತೆರಿಗೆಯನ್ನು ಸರ್ಕಾರದ ಬೊಕ್ಕಸಕ್ಕೆ ಜನ ಕೊಡಬೇಕೆಂದು ಹೇಳಬೇಕೆ ಅಥವಾ ಕೊಡಲೇಬೇಡಿ ಎಂದು ಹೇಳಬೇಕೆ ಎನ್ನುವುದನ್ನು ವಿಚಾರಮಾಡುತ್ತೇವೆ. ನಮ್ಮ ಪಕ್ಷದ ವಿಚಾರವನ್ನು ಹೇಳುವುದಾದರೆ, ನಾವು ಆಖೈರು ತೀರ್ಮಾನ ಮಾಡಿಲ್ಲ. ಇವತ್ತಿನದಿವಸ ಸರ್ಕಾರದ ಒಂದು ಮನೋಭಾವನೆಯಿಂದ ನನಗಾದರೂ ಒಂದು ಅನಿಸುತ್ತದೆ: ನಮ್ಮ ಮನಸ್ಸಿನ ಮೇಲೆ ಪ್ರಚೋದನೆ ಭಾವನೆ ಮಾಡುತ್ತಾ ಇದ್ದೀರಿ. ಇಷ್ಟು ಆತುರ ಆತುರವಾಗಿ ದೇಶದ ಜನತೆಮೇಲೆ ತೆರಿಗೆಯನ್ನು ಹೊರಿಸುತ್ತಾ ಹೋದರೆ ಜನಗಳು ಹೊರಲಾರದ ಪರಿಸ್ಥಿತಿ ಬಂದಾಗ ಕೊಡಬೇಡಿ ಎಂದು ಹೇಳತಕ್ಕಂಥ ಕಾಲ ಬರುತ್ತದೆ. ಈ ತೆರಿಗೆ ಕೊಡಬೇಡಿ ಎಂದು ಶಕ್ತಿ ಇಲ್ಲದವನಿಗೆ ಹೇಳುವಕಾಲ ಬರಬಾರದು. ದಯೆಯಿಟ್ಟು ಇಂಥ ಒಂದು ಸ್ಥಿತಿಗೆ ಸರ್ಕಾರದವರು ನಮ್ಮನ್ನು ಬಯ್ಯಬೇಡಿ ಎಂದು ಹೇಳುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಸರ್ಕಾರಕ್ಕೆ ಎಚ್ಚರಿಕೆ ಕೊಡಬೇಕೆಂದಿದ್ದೇನೆ. ಆತುರ ಆತುರವಾಗಿ ಇಂಥ ಮಸೂದೆಗಳನ್ನು ಶಾಸನ ಸಭೆಯಲ್ಲಿ ತರುವುದಕ್ಕೆ ಮುಂಚಿತವಾಗಿ ಸ್ವಲ್ಪ ನಿಧಾನವಾಗಿ ಯೋಚನೆ ಮಾಡಬೇಕು, ಅಗಲೇ ಎರಡು ಮಸೂದೆಗಳನ್ನು ಶಾಸನ ಸಭೆಯಲ್ಲಿ ಮಾಡಿಸಿ ಪಾಸ್ ಮಾಡಿಸಿಕೊಂಡಿದ್ದೀರಿ. ಇನ್ನುಳಿದ ಮಸೂದೆಗಳನ್ನು ಈ ಸಭೆಯ ಮುಂದೆ ಮಂಡಿಸುವಾಗ ನಿಧಾನವಾಗಿ ಸ್ವಲ್ಪ ಅವಕಾಶಕೊಟ್ಟು ಜನರ ಪ್ರತಿಕ್ರಿಯೆ ಏನಿದೆಯೆಂದು ತಿಳಿದುಕೊಂಡು ಆಮೇಲೆ ಈ ಸಭೆಯ ಮುಂದೆ ತರುವ ಒಂದು ಒಳ್ಳೆಯ ಪದ್ಧತಿಯನ್ನು ಏರ್ಪಡಿಸಿ ಎಂದು ಹೇಳುತ್ತೇನೆ. ಅವಸರ ಅವಸರವಾಗಿ ತಂದಿರುವ ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಈ ಮೂರು ದಿವಸಗಳಿಂದ ಒಂದಾದ ಮೇಲೆ ಒಂದು ಹೊರೆಯನ್ನು ಜನತೆಯ ಮೇಲೆ ಹೊರಿಸಲು, ಸರ್ಕಾರ ಬಹಳ ಗಟ್ಟಿಮನುಸ್ಸು ಮಾಡಿಕೊಂಡು ಹೆಲ್ತ್ ಸೆಸ್, ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಸ್ಟ್ಯಾಂಪ್ ಅಮೆಂಡ್‌ಮೆಂಟ್ ಆಕ್ಟ್ ತರುತ್ತಾ ಇದೆ. ಇನ್ನೂ ನಮ್ಮ ಮುಂದೆ 5-6 ಬಿಲ್ಲುಗಳುಇದ್ದು ದೇಶದ ಬಡ ಜನಗಳ ರಕ್ತವನ್ನು ಹೀರತಕ್ಕಂಥ ಒಂದು ಪ್ರಯೋಗವನ್ನು ಮಾಡುವುದಕ್ಕೆ ಹೊರಟಿರುವ ಹಾಗೆ ಕಾಣುತ್ತದೆ. ಇದರಲ್ಲಿ ಶ್ರೀಮಾನ್ ಕೃಷ್ಣಪ್ಪನವರು ಮಾತನಾಡುವುದರಲ್ಲಿ ಬಹಳ ಬುದ್ಧಿವಂತರು: ಈ ಟ್ಯಾಕ್ಸ್‌ನಿಂದ ಬಹಳ ತೊಂದರೆಯಾಗುವುದಿಲ್ಲವೆಂದು ಹೇಳಿದರು. ಆದರೆ ಯಾವುದೇ ತೆರಿಗೆ ಹಾಕಿದರೂನೂ, ಯಾವುದೇ ರೂಪದಲ್ಲಿ ಬಂದರೂ, ಕೊನೆಗೆ ಕೊಡತಕ್ಕಂಥವನು ರೈತ, ಬಡವ, ಅನ್ನುವುದನ್ನು ಮರೆತುಬಿಟ್ಟಹಾಗೆ ಕಾಣುತ್ತದೆ. ಈಗಾಗಲೇ ಶ್ರೀಮಾನ್ ಶಿವಪ್ಪನವರು ಹೇಳಿದಹಾಗೆ ಎರಡು ಕೋಟಿ ರೂಪಾಯಿಯಷ್ಟು ವರಮಾನ ಬರತಕ್ಕಂಥ ತೆರಿಗೆಗಳನ್ನು ನಿನ್ನೆ ಮೊನ್ನೆ ಹಾಕಿದ್ದಾರೆ. ಈಗಾಗಲೇ 3ನೆಯ ಪಾಂಚವಾರ್ಷಿಕ ಯೋಜನೆಯ ಒಂದು ವರ್ಷವನ್ನು ಕಳೆದಿದ್ದೇವೆ, 2ನೇ ವರ್ಷದಲ್ಲಿದ್ದೇವೆ. 42 ಕೋಟಿ ರೂಪಾಯಿಗಳು ನಮ ಯೋಜನೆಗೆ ಹಣಬೇಕು. ಇಷ್ಟು ಹಣವನ್ನು ಭರ್ತಿಮಾಡಬೇಕಾದರೆ ಒಂದು ತಲೆಗೆ 5 ರೂಪಾಯಿ ಚಿಲ್ಲರೆ ಸುಂಕ ಬೀಳುತ್ತದೆ. ಹೀಗೆ ನಮಗೆ ಇರತಕ್ಕ ವರಮಾನದಲ್ಲಿ ನಮ್ಮ ಜನ ಈ ಹೊರೆಯನ್ನು ಹೊರುವು

ದಕ್ಕೆ ಸಾಧ್ಯವೇ ಎಂಬುದನ್ನು ನಮ್ಮ ಹಣಕಾಸಿನ ಮಂತ್ರಿಗಳು ಯೋಚನೆ ಮಾಡಿದ್ದಾರೆಯೋ ಇಲ್ಲವೋ ಎಂದು ನನಗಾದರೂ ಅನಿಸುತ್ತದೆ. ಇವತ್ತು ನೀವು ಯಾವ ಯೋಜನೆಗಾಗಿ ಹಣ ಖರ್ಚು ಮಾಡುತ್ತಿದ್ದೀವೆಂದು ಹೇಳುತ್ತಿದ್ದೀರೋ-ಮೊದಲನೆಯ ಮತ್ತು ಎರಡನೆಯ ಪಾಂಚವಾರ್ಷಿಕ ಯೋಜನೆಗಳಲ್ಲಿ-ಅದರಲ್ಲಿ ಲಾಭದಾಯಕವಾದ ಬಾಬುಗಳಿಗೆ ಖರ್ಚು ಮಾಡುವ ಹಣವೆಷ್ಟು, ಅದರಿಂದ ಇವತ್ತು 10 ವರ್ಷದ ಮೇಲೆ ಸರ್ಕಾರಕ್ಕೆ ಬರುತ್ತಾ ಇರತಕ್ಕಂಥ ಫಾಯಿದೆ ಎಷ್ಟೆಂಬುದನ್ನು ನಮಗೆ ತಿಳಿಸಿಲ್ಲ. ಅದೂ ಅಲ್ಲದೆ ನಾವು ಪ್ರತಿನಿತ್ಯವೂ ನೋಡತಕ್ಕಂಥ ಒಂದು ಸಂದರ್ಭದಲ್ಲಿ, ನೀವು ಏನು ಯೋಜನೆಯನ್ನು ಹಾಕಿಕೊಂಡಿದ್ದೀರೋ, ಅದರಿಂದ ಒಂದು ಮೂರುಕಾಸಿನ ಒಳ್ಳೆಯ ಕೆಲಸ ದೇಶಕ್ಕೆ ಆಗುತ್ತಾ ಇಲ್ಲವೆಂದು ಅನಿಸುತ್ತದೆ. ನಾವು ಹಿಂದೆ ಇದ್ದರೂ ಪರವಾಗಿಲ್ಲ, ನಿಧಾನವಾಗಿ ಹೋದರೂ ಪರವಾಗಿಲ್ಲ, ಇಷ್ಟು ಆತುರ ಆತುರವಾಗಿ ಕೆಲಸಮಾಡಿ, ನಾವು ಕಷ್ಟಪಟ್ಟು ಕೊಟ್ಟಂಥ ಹಣ ಕೂಡ ವೃಥಾ ಖರ್ಚಾಗಿ, ಅದರಿಂದ ಜನಗಳಿಗೆ ಎಳ್ಳಷ್ಟು ಪ್ರಯೋಜನವಾಗದೆ ಇರುವ ಕಾಲದಲ್ಲಿ, ಈ ಯೋಜನೆಯೇ ಬೇಡ, ಈ ತೆರಿಗೆ ಹೊರೆಯಿಂದ ಮಾತ್ರ ನಮ್ಮನ್ನು ಕಾಪಾಡಿ ಎಂದು ಸರ್ಕಾರವನ್ನು ಕೇಳಿಕೊಳ್ಳಬೇಕಾಗಿದೆ. ಏಕೆಂದರೆ ಹತ್ತಾರುವರ್ಷಗಳ ಹಿಂದೆ ಲಕ್ಷಾಂತರ ರೂಪಾಯಿ ಕೆಲಸವನ್ನು ತೆಗೆದುಕೊಂಡು, 6-9-10 ಲಕ್ಷ ರೂಪಾಯಿ ಖರ್ಚುಮಾಡಿ, ಆ ಕೆಲಸಗಳನ್ನು ಹಾಗೇನೇ ನಿಲ್ಲಿಸಿಬಿಟ್ಟಿದ್ದಾರೆ. ಅದೆಲ್ಲಾ ಕೆಲಸ ಮಾಡಿದ್ದರೆ ಇವತ್ತು ಉತ್ಪತ್ತಿ ಕೊಡುತ್ತಾ ಇರಲಿಲ್ಲವೇ? ಉತ್ಪತ್ತಿ ಬಂದಿದ್ದರೆ. ಹೊಸದಾಗಿ ತೆರಿಕೆ ಹಾಕಿರತಕ್ಕಂಥ ಹೊರೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲವೇ ಎಂದು ಕೇಳಬೇಕಾಗಿದೆ, ಜೊತೆಗೆ ಅಕ್ಕಿ, ರಾಗಿಗೆ ಸಹಿತ ಹಾಕುತ್ತೀರ, ಎಂದರೆ, ರಾಗಿ ಕಮರ್ಷಿಯಲ್ ಕ್ರಾಪೇ? ಗೆ ನೀವು ಯೋಜನೆ ಮಾಡಿಕೊಂಡು, ನಾವು ತಿನ್ನತಕ್ಕ ಹಾರದ ಮೇಲೆ ತೆರಿಗೆ ಹಾಕುವ. ಪರಿಸ್ಥಿತಿ ಬಂದರೆ ಇದರಿಂದ ನೀವು ಸ್ವರ್ಗ ತಂದುಕೊಟ್ಟರೂ ನಮಗೂಬೇಡ, ನಾವು ಇದ್ದಹಾಗೇನೇ ಇರುತ್ತೇವೆ. ಮೈಸೂರು ಸಂಸ್ಥಾನದಲ್ಲಿ ಬಹಳ ಹಿಂದಿನಿಂದಲೂ ಒಳ್ಳೆಯ ಕೆಲಸ ಮಾಡಿಕೊಂಡು ಮಾದರಿ ದೇಶ ಅನಿಸಿಕೊಂಡಿದ್ದೆವು; ಇಷ್ಟು ಆತುರ ಆತುರವಾಗಿ ಮಾಡದೆ ಇದ್ದರೂ, ಒಳ್ಳೆಯ ಕೆಲಸಗಳು ಆಗಿವೆ. ಈಗ ನಿನ್ನೆ ಮೊನ್ನೆ ಆದ ಭಾಷಣಗಳನ್ನು ಕೇಳಿದೆ: "ಬೊಂಬಾಯಿ ಕರ್ಣಾಟಕದಲ್ಲಿ ಇಷ್ಟು ಕೊಡುತ್ತೇವೆ, ಹೈದರಾಬಾದ್ ಕರ್ಣಾಟಕದಲ್ಲಿ ಇಷ್ಟು ಕೊಡುತ್ತೇವೆ, ಮೈಸೂರಿನಲ್ಲಿ ಕಮ್ಮಿ ಕೊಡುತ್ತೀರ" ಎಂದು ಹೇಳಿದ್ದನ್ನು ಕೇಳಿ ನಮ್ಮ ಮೇಲೆಯೇ ಎಲ್ಲಾ ಹೊರೆಯೂ ಬೀಳುತ್ತದೆಯೋ ಎಂಬ ಒಂದು ಭಯ ಬಂದಿದೆ. ನಮ್ಮಲ್ಲಿ ಒಳ್ಳೇ ಆಡಳಿತಗಾರರಿಗೆ ಕುಂದಿಲ್ಲ. ಒಳ್ಳೊಳ್ಳೆಯವರು ಇದ್ದಾರೆ. ಹಣ ದುರ್ವ್ಯಯವಾಗದಂತೆ ನೋಡಿಕೊಂಡು ಸರಿಯಾದ ರೀತಿಯಲ್ಲಿ ವ್ಯಯವಾಗುವ ಕಾರ್ಯಕ್ರಮವನ್ನು ಅನಷ್ಠಾನಕೆ ತಂದರೆ ಕೋಟ್ಯಾಂತರ ರೂಪಾಯಿಗಳನ್ನು ಈ ವೆಚ್ಚ ಮಾಡತಕ್ಕಂಥ ಈ ಬಾಬುಗಳಲ್ಲಿ ಉಳಿಸುವುದಕ್ಕೆ ಸಾಧ್ಯವಿದೆ. ಇದು ಆಡಿಟ್ ರಿಪೋರ್ಟು ಮತ್ತು ನೇರವಾಗಿ ಕೂಟ್ಟಿರತಕ್ಕ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಆರಾಣೆ ಖರ್ಚಾಗಿ 10 ಆಣೆ ಪೋಲು ಆಗುತ್ತದೆಂದು ತಿಳಿದಂಥವರು ಹೇಳುತ್ತಾರೆ. ಹೆಬ್ಬಾಗಿಲಿನಲ್ಲಿ ಹೋಗುವದನ್ನು ನೋಡದೆ ಕಿರುಬಾಗಿಲನಲ್ಲಿ ಕಂಡುಹಿಡಿದುಕೊಂಡು ಇಂಥ ಟ್ಯಾಕ್ಸನ್ನು ಹೇರುವುದಕ್ಕೆ ಮನಸ್ಸು ಮಾಡಿದ್ದು ಸುತರಾಂ ನ್ಯಾಯವಲ್ಲ. ಶ್ರೀ ಶಿವಪ್ಪನವರು ಹೇಳಿದಹಾಗೆ ಜನತೆಯ ಮುಂದೆ ಈ ಪ್ರಶ್ನೆ ಇಟ್ಟು ಅವರ ಅಭಿಪ್ರಾಯ ತೆಗೆದುಕೊಂಡು ಮಾಡುವುದು ಸೂಕ್ತ. ನಿನ್ನೆ ಹಣಕಾಸಿನ ಮಂತ್ರಿಗಳು ನಾವು ಎಷ್ಟು ಸಮಂಜಸವಾದ ತಿದ್ದುಪಡಿಯನ್ನು ತಂದರೂ ಕೂಡ ಅದಕ್ಕೆ ಒಪ್ಪಿಗೆ ಕೊಡದೇ ಇರುವದನ್ನು ನೋಡಿದರೆ ಎಷ್ಟು ಬೇಗ ತೆರಿಗೆ ಹಾಕಿದರೆ ಅಷ್ಟು ಒಳ್ಳೆಯದು ಎಂದು ತಿಳಿದುಕೊಂಡ ಹಾಗೆ ಕಾಣುತ್ತದೆ. ಈ ಮೂರುದಿವಸ ಹಣಕಾಸಿನ ಕಾನೂನುಗಳು ಬಂದಿರುವುದಲ್ಲದೆ ಇನ್ನು ಮನಸ್ಸಿಗೆ ಬಹಳ ಕಿರಿಕಿರಿ ಉಂಟುಮಾಡತಕ್ಕಂಥಾದ್ದು ಬರುವವು ಇವೆ. ಸೇಲ್ಸ್ ಟ್ಯಾಕ್ಸ್ ಅಮೆಂಡಮೆಂಟ್ ಬಿಲ್ಲು ಬಿಲ್ಡಿಂಗ್ ಟ್ಯಾಕ್ಸ್ ಇಮ್ಮೂವಬಲ್ ಪ್ರಾಪರ್ಟಿ ಟಾಕ್ಸ್ ಇವುಗಳನ್ನೆಲ್ಲ ನೋಡಿದರೆ, ಅಲ್ಪಸ್ವಲ್ಪ ನ್ಯಾಯಮಾರ್ಗದಲ್ಲಿ ಹೋಗಿ ಮನೆ ಮಠ ತಾವು ಕೊಂಡಿರುವವರು ಕೂಡ ಮನೆಯ ಮೇಲೆ ಕೊಟ್ಟಂಥ ತೆರಿಗೆಯನ್ನು ಮತ್ತೆ ಬಾಡಿಗೆಗೆ ಬರತಕ್ಕವರ ಮೇಲೆ ಹೇರಬೇಕಾಗುತ್ತದೆ. ಈಗಾಗಲೇ ಜೀವನದ ಖರ್ಚು ವೆಚ್ಚ ಹೆಚ್ಚಾಗಿದೆ. ಸಂಬಳ ಸಾರಿಗೆಗಳು ಸಾಲುವುದಿಲ್ಲ ಎಂದು ಆಫೀಸನಲ್ಲಿ ಕೆಲಸ ಮಾಡತಕ್ಕ ನೌಕರ ವರ್ಗದವರು ಹೇಳುತ್ತಾ ಇದ್ದಾರೆ. ಹಾಗೆಯೇ ಬಾಕಿಯವರಿಗೂ ತೊಂದರೆಯಾಗುತ್ತದೆ. ಒಟ್ಟಿನಲ್ಲಿ ರೈತ ದೇಶದ ಹೊರೆ ಹೊರಬೇಕಾದ ಪರಿಸ್ಥಿತಿ ಬರುವದರಿಂದ ದಯವಿಟ್ಟು ಸರಕಾರದವರು ಆತುರ ಆತುರವಾಗಿ ಜನರಮೇಲೆ ತೆರಿಗೆಯನ್ನು ಹೇರುವುದನ್ನು ನಿಲ್ಲಿಸಿ, ಈ ಮೂರನೇ ಯೋಜನೆಯ ಕೆಲಸ ಕಾರ್ಯಗಳನ್ನು ಅರ್ಧಕ್ಕೆ ನಿಲ್ಲಿಸಿ, ಹೊರಲಾರದ ಹೊರೆಯನ್ನು ನಮ್ಮ ಜನತೆಯ ಮೇಲೆ ಹಾಕಬಾರದು ಎಂದು ಹೇಳಿ, ನಮ್ಮ ಮುಂದೆ ಇರತಕ್ಕ ತೆರಿಗೆ ಬಿಲ್ಲನ್ನು ವಾಪಸ್ ತೆಗೆದುಕೊಂಡು ಬಡ ರೈತನಮೇಲೆ ಇರುವ ಹೊರೆಯನ್ನು ತಪ್ಪಿಸುತ್ತಾರೆಂದು ನಂಬಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†Sri V. S. PATIL (Belgaum-I).—I will not take much time of this Hon'ble House by speaking on this amendment Bill of Mysore Stamp Act. I cannot criticise the Government for asking for more money by taxation for as we all know the Government is in a very bad position so far as income is concerned and they require money. Whatever remarks I have to offer regarding the increase of taxes I will speak on other new taxation bills when they come up before this House. Now, I will restrict myself to certain technical arguments so far as the present Bill is concerned. In our country, everywhere we are trying to see that there is no evasion of taxes introduced by various enactments.

3-00 P.M.

In this Bill, Sir, an attempt has been made to bring within the purview

(SRI V. S. PATIL)

of taxation of stamp the partition effected or proposed to be effected by the joint owners or co-owners. For that purpose in clause 2(3) (k) the word 'partition' has been tried to be defined in a more comprehensive way. At present, Sir, if there is an old partition, then every joint owner or co-owner can evade the stamp duty even though they effect partitions between themselves. No oral partition can be challenged in any court of law. That is a great concession prevailing in the country and it appears by this amendment, that is by sub-clause (k), the Government wants to see that all instruments effecting or directing or evidencing partition between the co-owners shall be liable to a tax of stamp duty. But still, I feel Sir, that the wording that has been used here will give full scope to the tax evaders to see that they do effect partitions orally and so they are not liable to pay stamp duty. For example, the present practice is that people divide their properties worth lakhs of rupees simply giving a verdict or intimation to the village officers that such and such portions have been allotted or given to one of the sharers and his name should be entered in the record of rights so far as that property is concerned. That finishes off the whole matter and the proper stamp that has to be paid is always evaded. This is the loop-hole so far as Stamp Act is concerned. This loop-hole must be stopped and Government should get money from those who are in a position to pay. I say the words 'position to pay', because people who take the share worth thousands of rupees, evade the tax by simply saying that they have orally divided the property. I should like to invite the attention of the Hon'ble Minister in charge of this measure to the definition of 'instrument of partition'..............The word used here is 'means'.

MR. SPEAKER.—The Hon'ble Member may continue after tea. The House will now rise and meet half-an-hour later.

———

The House adjourned for recess at Five Minutes past Three of the Clock and re-assembled at Thirty-five Minutes past three of the Clock.

———

[MR. SPEAKER in the Chair]

SRI V. S. PATIL.—Sir, I was referring to sub-clause (*k*) regarding instrument of partition. If the Government want really to tax those who effect partition, there must be some provision in this Bill. Unless there is evidence by document, they should not be recognised for any purpose by Government.

MR. SPEAKER.—It is a point on which much could be said. Basically, oral partition is perfectly all right.

SRI V. S. PATIL.—Sir, there are various judgments of various High Courts including the Supreme Court and still we are in doubt. That is why I suggest to Government to make a provision that every partition must have a document and it should be registered. If this is done, they can get much money and evaders will be very few. Even in sub-clause (ii) the words are: "an award by an arbitrator directing a partition". Supposing the matter is referred to the arbitrator and he effects the partitionh what about that case? As the word used is 'means', the partition effected by an arbitrator will not come within the purview of this clause. I, therefore, suggest that the words 'an award by an arbitrator directing or effecting the partition' should be there in order to avoid the loop-hole that is likely to be taken advantage of by the people. Arbitrators are appointed not only for direction but they are appointed even to effect the partition. If there is a partition effected by the arbitrator, that document will not come within the purview of this clause and the very purpose with which Government is trying to include instrument of partition will be defeated. You are changing the original and fixing up the limited words in the amending bill.

In sub-clause (iii) it is said:

"when any partition is effected without executing any such instrument, any instrument or instruments signed by the co-owners and recording whether by way of declaration of such partition or otherwise......"

It is here we take the advantage. Thousands of people simply put in a list saying that this much property has already been partitioned and it has to be mentioned in the name of A, B and C etc. If Government are in need of money, they have to tax those who have taken shares in the property.

SRI G. V. GOWDA (Palya).—Big shares.

SRI V. S. PATIL.—Yes, big shares. Poor people will certainly pay. It is generally the rich that evade the tax. That is why I am suggesting that they should not be allowed to have any scope for evading the stamp duty. Then, Sir, there is one thing which I should like to bring to the notice of the Hon'ble Minister. We must enact laws which must be equitable. I should like to refer to clause 5. Here a news section 3A is to be inserted and in the proviso to this, the last sentence is:

"...and where the total amount so calculated includes in addition to any multiple of five naye Paise a fraction of five naye Paise, such fraction shall be deemed to be five naye Paise, and the total amount of duty payable on the instrument shall be determined accordingly."

Why should this be added, Sir? Supposing by calculation it comes to 6 nP. Why should we pay 10 nP. What I want is equity in dealings. If the calculation comes to less than 2½ nP. it must be given up. If it is more than 2½ or 3 nP. it should be rounded to 5 nP. That would be equitable both for the payer and also to the Government. Government should not squeeze out money like this.

I may quote an example, Sir. In our local area, a local fund cess was taxed at 3 annas in a rupee. When this decimal coin came in—out of the three annas, one anna would go for the education fund and one anna for local works and 3 annas would be equal to 19 nP. It was called local fund cess. When this bifurcation came in recently, because education has been taken over by the Government, Government was entitled to take one anna. But what our Government is doing is, tney are taking 7 nP. and for 2 annas, they are giving 12 nP. That is improper and unjust. The same thing will happen here, Sir.
People should not think that Government is trying to get as much money as possible by resorting to any means. That should not be the case. We must be very equitable in all these cases. Therefore, I should like to suggest that if the fraction is more than 2½ it should be rounded up to 5 and if it is less than 2½, it should be given up.

In clause 9, generally what is said in the objects and reasons statement is that for want of funds, Government intends to increase the stamp duty by 50 per cent. But if you look to this clause 9, you will find:

"(a) in the proviso to sub-section (1), for the words "one rupee", the words "two rupees and twenty-five naye Paise" shall be substituted;"

This is more than double. This is too much. When you declare that you want to increase by 50 per cent, this is more than 200 per cent. This should not be the case.

Then I should like to refer only to one article in the new schedule. That is article 17 which relates to my fraternity of advocates. Up till now, Sir, an advocate was not charged with the stamp duty till the new Bar Councils Act was passed by the Central Government. But now the Central Government have passed an Act by which all advocates in the country will come within the same category on the same basis and they have fixed a fee of Rs.250 for the sannad to be an advocate. But why this stamp duty is to be imposed on this legal profession alone Sir? Is there any stamp duty for following any other profession in this country. Take for example a medical man, a writer or a contracter or an engineer, or any other profession.

AN HON'BLE MEMBER.—Or politician?

Sri V. S. PATIL.—There are so many advocates in this Assembly as well as outside, those who have no practice take to politics.

(At this stage Mr. Speaker rang the Bell in disapproval)

Sri V.S. PATIL.—No, Sir, I can say most of them with exceptions like yourself, Sir.

ಯಲ್ಲಿದ್ದ ತೆರಿಗೆಗೂ ಈ ಮಸೂದೆಯ ಪ್ರಕಾರ ಕೊಡಬೇಕಾದ ತೆರಿಗೆಗೂ ಇರುವ ಅಂತರ ಶೇಕಡಾ 600ರಷ್ಟು ಜಾಸ್ತಿಯಾಗುವುದು. ಅದು ಹೇಗೆ ಎನ್ನುವುದನ್ನು ಉದಾಹರಣೆ ಕೊಟ್ಟು ತೋರಿಸುತ್ತೇನೆ. 1957ರ ಮೊದಲು ಒಂದು ಸಾವಿರ ರೂಪಾಯಿ ಕ್ರಯ ಪತ್ರಕ್ಕೆ $12\frac{1}{2}$ ರೂಪಾಯಿ ಸ್ಟ್ಯಾಂಪ್ ಕೊಡಬೇಕಾಗುತ್ತಿತ್ತು. 1957ನೇ ಆಕ್ಟ್ ಪ್ರಕಾರ ಅದು 30 ರೂಪಾಯಿ ಮಾಡಿದರು. ಈಗ 45 ರೂಪಾಯಿ ಮಾಡಿದ್ದಾರೆ. ಇದರ ಜೊತೆಗೆ ತಾಲ್ಲೂಕು ಬೋರ್ಡಿನ ಇನ್ನೂ 30 ರೂಪಾಯಿ ಸಹ ಕೊಡಬೇಕಾಗುತ್ತದೆ. ಅಂದರೆ ಒಂದು ಸಾವಿರ ರೂಪಾಯಿ ಕ್ರಯ ಪತ್ರಕ್ಕೆ 75 ರೂಪಾಯಿ ಸ್ಟ್ಯಾಂಪ್ ಕೊಡಬೇಕಾಗುತ್ತದೆ. 1957ರಲ್ಲಿ $12\frac{1}{2}$ ರೂಪಾಯಿ ಇದ್ದುದು 1962ರಲ್ಲಿ 75 ರೂಪಾಯಿವರೆಗೆ ಹೆಚ್ಚಿದೆ. ಇಷ್ಟು ಸ್ಟ್ಯಾಂಪ್ ತೆರಿಗೆಯನ್ನು ಬಡ ರೈತರು ಕೊಡುವುದಾದರೆ ಅವರ ಮನೆ ಮಠ ಉಳಿಯುವುದಿಲ್ಲ. ಅವರು ಹಾಳಾಗಿ ಹೋಗುತ್ತಾರೆ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಮುಂದುವರಿದ ಅನೇಕ ರಾಷ್ಟ್ರಗಳಲ್ಲಿ ಟ್ಯಾಕ್ಸ್-ಫ್ರೀ ಸ್ಟೇಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಈರೀತಿ 600ರಷ್ಟು ಟಾಕ್ಸ್ ಆರು ವರ್ಷಗಳಲ್ಲಿ ಹೆಚ್ಚಿಸಿದರೆ ಬಡರೈತರು ಹೇಗೆ ಉಳಿಯುತ್ತಾರೆ? ಸಾಲ ತೆಗೆದುಕೊಳ್ಳುವಾಗ ಆಧಾರ ಪತ್ರ ಬರೆದು ಕೊಡಬೇಕಾಗುತ್ತದೆ. ಇಂಥ ಆಧಾರ ಪತ್ರದ ಮೇಲೆ 600 ಪರ್ಸೆಂಟ್ ಟ್ಯಾಕ್ಸ್ ಬಡವರು ಕೊಡಬೇಕಾಗುತ್ತದೆ. ಇದಲ್ಲದೆ ರಿಜಿಸ್ಟ್ರೇಷನ್ ಫೀ ಸಹ ಕೊಡಬೇಕಾಗುವುದು. 1000 ರೂಪಾಯಿ ಸಾಲ ತೆಗೆದುಕೊಂಡರೆ ಎಲ್ಲ ಖರ್ಚು ಹೋಗಿ ಕೇವಲ 500 ರೂಪಾಯಿ ಅವನ ಕೈಯಲ್ಲಿ ದೊರೆಯುತ್ತದೆ. ಹೀಗಾದರೆ ಅವನ ಗತಿ ಏನಾಗಬಹುದು ಎನ್ನುವುದನ್ನು ಯೋಚನೆ ಮಾಡಬೇಕು. ಈ ಸ್ಟ್ಯಾಂಪ್ ಅಕ್ಟಿನಿಂದ 600 ಪರ್ಸೆಂಟ್ ಹೊರೆ ಬಿದ್ದಿದೆ. ಇನ್ನೊಂದು ಸಣ್ಣ ವಿಷಯ. ಸಾಮಾನ್ಯವಾಗಿ ಸ್ಟ್ಯಾಂಪ್ ಹಚ್ಚಿ ರಸೀದಿ ಕೊಡುವುದಕ್ಕೆ 6 ಕಾಸು ಸ್ಟ್ಯಾಂಪ್ ಇದ್ದುದನ್ನು 15 ನಯೇ ಪೈಸೆ ಮಾಡಿರುವುದನ್ನು ನೋಡಿದರೆ ಎಷ್ಟು ಪರ್ಸೆಂಟ್ ಜಾಸ್ತಿಯಾಗುತ್ತದೆ ಎನ್ನುವುದನ್ನು ಎಲ್ಲರೂ ಯೋಚನೆ ಮಾಡಬೇಕಾದ ವಿಷಯ. ಯಾಕಂದರೆ ಈ ರೀತಿ ಜಾಸ್ತಿಯಾದರೆ ಬಡವರಿಗೆ ತೊಂದರೆ ಯಾಗುತ್ತದೆ. ಮತ್ತು ಹೊಟ್ಟೆಯುರಿಯುತ್ತದೆ. ಆದ್ದರಿಂದ ದಯವಿಟ್ಟು ಇದನ್ನೆಲ್ಲ ಆಲೋಚನೆ ಮಾಡಬೇಕು. ಈ ಸ್ಟ್ಯಾಂಪ್ ಆಕ್ಟಿನಿಂದ ಬಡವರ ಮೇಲೆ ಹೊರೆ ಬೀಳುವುದಿಲ್ಲವೆಂದು ಮಂತ್ರಿಗಳು ಹೇಳಿದರು, ಆದರೆ ನಿಜವಾಗಿಯೂ ಇದರಿಂದ ಬಡವರಿಗೆ ಅನುಕೂಲವಾಗಿಲ್ಲ, ದೊಡ್ಡವರಿಗೆ ಅನುಕೂಲವಾಗಿದೆ. ಹಿಂದೆ ಒಂದು ಪತ್ರ ಬರೆಯುವುದಕ್ಕೆ $22\frac{1}{2}$ ರೂಪಾಯಿ ಸ್ಟ್ಯಾಂಪ್ ಫೀ ಇದ್ದುದನ್ನು ಈಗ $33\frac{3}{4}$ ರೂಪಾಯಿ ಮಾಡಲಾಗಿದೆ. ಒಬ್ಬ ಬಡವನು ಒಂದು 50 ರೂಪಾಯಿ ಆಸ್ತಿಯ ದತ್ತು ಪತ್ರ ಬರೆಯುವುದಕ್ಕೆ $33\frac{3}{4}$ ರೂಪಾಯಿ ಸ್ಟ್ಯಾಂಪ್ ಫೀ ಕೊಡಬೇಕಾಗಿದೆ. ಇದು ಯಾವ ಧರ್ಮ ಎನ್ನುವುದನ್ನು ಆಲೋಚನೆ ಮಾಡಬೇಕು. ಬಡವರಿಂದ ಟಾಕ್ಸ್ ವಸೂಲ್ಮಾಡದೆ ಹೆಚ್ಚು ಹಣವಿರುವವರ ಕಡೆಯಿಂದ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಬೇಕು. ಆದ್ದರಿಂದ ಈ ಮಸೂದೆಯಲ್ಲಿ ಈಗಲಾದರೂ ಅವಶ್ಯವಿರುವ ಬದಲಾವಣೆ ಮಾಡಬೇಕು. ಪಾರ್ಟಿಷನ್ ಡೀಡ್ ವಿಚಾರದಲ್ಲಿ ಸರಿಯಾಗಿ ಆಲೋಚನೆ ಮಾಡಿಲ್ಲವೆಂದು ಕಾಣುತ್ತದೆ. ಇದರಲ್ಲಿ ಲೀಕೇಜ್ ಬೇಕಾದಷ್ಟಿದೆ. ಆಧಾರ ತೀರುವಳಿ ರಿಜಿಸ್ಟ್ರೇಷನ್‌ನಿಂದ ಸರ್ಕಾರಕ್ಕೆ ಬರಬೇಕಾದ ಕೋಟ್ಯಾಂತರ ರೂಪಾಯಿ ಹಣ ಲುಕ್ಸಾನಾಗಿದೆ. ಅಂಥಾದ್ದನ್ನು ಬಿಟ್ಟು ಬಿಡದೆ ವಸೂಲು ಮಾಡುವುದಕ್ಕೆ ಯೋಚನೆ ಮಾಡಬೇಕು. ಆದರೆ ಅದನ್ನು ಮಾಡದೆ ಹೊಸದಾಗಿ ಟ್ಯಾಕ್ಸ್ ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. 1000 ರೂಪಾಯಿ ಬಾಟಮರೀ ಬಾಂಡಿಗೆ ಒಂದು ಫ್ಲಾಟ್ ರೇಟ್‌ನಿಂದ 22 ರೂಪಾಯಿ 50 ನಯಾಪೈಸೆ ಸ್ಟ್ಯಾಂಟ್ ಫೀ ಹಾಕಿದ್ದಾರೆ.

ರಿಲೀಸ್ ಡೀಡ್‌ಗೆ, bottomry Bondಗೆ *pro rata* ಯಾವ ರೀತಿ ಇದೆಯೋ ಆಪ್ರಕಾರ ಏಕೆ ಹಾಕಬಾರದು ? ಸಾವಿರ ರೂಪಾಯಿವರೆಗೂ Bottomry Bondಗೆ ಇರುವ ರೇಟ್ ಹಾಕಿ, ಸಾವಿರ ರೂಪಾಯಿ ಮೇಚ್ಚ ಪತ್ರದ ಮೇಲೆ flat rate ಹಾಕುತ್ತಾರೆ. ಒಂದು ಲಕ್ಷ ರೂಪಾಯಿ ಆಸ್ತಿಯಾದರೂ ಕೂಡ ಒಂದೇ ರೇಟ್ ಹಾಕುತ್ತಾರೆ. ಇದು ಸಾಹುಕಾರರಿಗೆ ಅನುಕೂಲ ಮಾಡುವುದಲ್ಲವೇ ? ಇದು ಸಾಹುಕಾರರ ಪರವಾಗಿದೆಯೋ ಅಥವಾ ಬಡವರ ಪರವಾಗಿದೆಯೋ ಎಂಬುದನ್ನು ನೋಡಬೇಕು.

5-00 P.M.

54ನೆಯ ಬಾಬಿನಲ್ಲಿ Trust Deed ಎಂದು ಇದೆ. ಇದಕ್ಕೆಲ್ಲ ಒಂದೇ ರೇಟ್ ಹಾಕಿದ್ದಾರೆ. ಸಾವಿರ ರೂಪಾಯಿವರೆಗೆ *pro rata* ಪ್ರಕಾರ ಹಾಕಿ, ಸಾವಿರ ರೂಪಾಯಿ ಆದಮೇಲೆ ಒಂದು flat rate ಹಾಕಿದ್ದಾರೆ. ಸಾಮಾನ್ಯವಾಗಿ ಆಸ್ತಿ ಜಾಸ್ತಿ ಇದ್ದ ಹಾಗೆಲ್ಲ stamp duty ಜಾಸ್ತಿ ಮಾಡಬೇಡವೇ? Money begets money ಎಂದು ದುಡ್ಡು ಇರುವ ಹತ್ತಿರ ದುಡ್ಡನ್ನು ತೆಗೆದುಕೊಳ್ಳಬೇಕೋ ಬಡವರ ಹತ್ತಿರ ತೆಗೆದುಕೊಳ್ಳಬೇಕೋ ನೋಡಿ.

Partnership ಮೇಲೆ ಕೂಡ ಇದೇ ರೀತಿ flat rate ಹಾಕಿದ್ದಾರೆ. ಸಾವಿರ ರೂಪಾಯಿ partnership ಆಗಲೀ ಕೋಟಿ ರೂಪಾಯಿ partnership ಆಗಲೀ ಒಂದೇ flat rate ಹಾಕಿರುವುದರಿಂದ ಈ ಮಸೂದೆ ಸಾಹುಕಾರರ ಪರವಾಗಿದೆ ಎಂದು ಹೇಳಬಹುದು.

Mr. SPEAKER.—A little information in regard to these various documente the Hon'ble member has referred to ars there any instances, either here or elsewhere, where it is done as he is now suggesting ?

Sri H. R. KESHAVA MURTHY.—Mysore is a model State Sir ?

(*Laughter*)

Mr. SPEAKER.—So, he wants this to be changed so that Mysore may become a model State and all over the world they may copy Mysore ? That is all right.

(*Laughter*)

ಶ್ರೀ ಎಚ್. ಆರ್. ಕೇಶವಮೂರ್ತಿ.—ಅಡ್ವೊಕೇಟರ ರಿಜಿಸ್ಟ್ರೇಷನ್ನಿಗೆ 500 ರೂಪಾಯಿ ಫೀ ಇತ್ತು ಇಂಡಿಯನ್ ಬಾರ್ ಕೌನ್ಸಿಲ್‌ನವರು 250 ರೂಪಾಯಿ ಫೀ ತೆಗೆದುಕೊಳ್ಳುವುದರಿಂದ ಇಲ್ಲಿ 250

(ಶ್ರೀ ಎಚ್. ಆರ್. ಕೇಶವಮೂರ್ತಿ)

ರೂಪಾಯಿಗಿಂತ ಹೆಚ್ಚಿಗೆ ಫೀ ಹಾಕುವುದಕ್ಕಿಲ್ಲವೆಂದು 250 ರೂಪಾಯಿಗೆ restrict ಮಾಡಿದ್ದಾರೆ. ರೈತರ ಮೇಲಿನ ತೆರಿಗೆಯನ್ನು ಜಾಸ್ತಿ ಮಾಡುತ್ತಿದ್ದಾರೆ, ಅವರ ಮೇಲೆ ತೆರಿಗೆಯನ್ನು ಹೆಚ್ಚಿಸಲು ಇವರಿಗೆ ಯಾರ ಭಯವೂ ಇಲ್ಲವೋ? ಲಾಯರುಗಳಿಗೆ ಫೀ ಜಾಸ್ತಿ ಮಾಡಬೇಕಾದರೆ ಇವರಿಗೆ ಬಾರ್ ಕೌನ್ಸಿಲ್ ನವರ ಹೆದರಿಕೆ ಬರುತ್ತದೆ. ದಯವಿಟ್ಟು ದೇವರಿಗೆ ಅಂಜಿ ರೈತರ ಮೇಲೆ ತೆರಿಗೆಯ ಭಾರವನ್ನು ಹೆಚ್ಚಿಸ ಬೇಡಿ. ನಾನು ಹೆಚ್ಚಿಗೆ ಹೇಳುವುದಿಲ್ಲ.

ಒಟ್ಟಿನಲ್ಲಿ ಪ್ರಜಾಪ್ರಭುತ್ವದ ಸಂವಿಧಾನದಲ್ಲಿ ತೆರಿಗೆ ಹಾಕುವ ಅಧಿಕಾರವನ್ನು ಕೊಟ್ಟಿರುತ್ತಾರೆ. ಇದರ ಪ್ರಕಾರ ಸರ್ಕಾರ ತೆರಿಗೆಗಳನ್ನು ಹೇರುತ್ತಿರುವುದು ಹೇಗಿದೆ ಎಂದರೆ "ಭಸ್ಮಾಸುರನ ಉರಿಹಸ್ತ" ಇದ್ದ ಹಾಗೆ ಇದೆ. ಭಸ್ಮಾಸುರ ಈಶ್ವರನಿಂದ ವರ ಪಡೆದು ತಾನು ಯಾರ ತಲೆಯ ಮೇಲೆ ಕೈಯಿಟ್ಟರೆ ಅವರು ಭಸ್ಮವಾಗಬೇಕು ಎಂಬ ವರವನ್ನು ಪಡೆದ. ಇದರಿಂದ ಪ್ರತಿಯೊಬ್ಬರೂ ಅವನಿಗೆ ಹೆದರಿದರು. ಭಸ್ಮಾಸುರನು ಪರಮೇಶ್ವರನ ತಲೆಯ ಮೇಲೆಯೇ ತನ ಉರಿಹಸ್ತ ವನ್ನು ಇಡಲು ಹೋದನು ಪರಮೇಶ್ವರನು ಹೆದರಿ ವಿಷ್ಣುವಿನ ಬಳಿ ಹೋಗಲು, ವಿಷ್ಣುವು ಮೋಹಿನೀ ವೇಷವನ್ನು ಧರಿಸಿ ಭಸ್ಮಾಸುರನು ತನ್ನ ತಲೆಯ ಮೇಲೆಯೇ ಉರಿಹಸ್ತವನ್ನು ಇಟ್ಟುಕೊಳ್ಳುವಂತೆ ಮಾಡಿ ಅವನನ್ನು ಭಸ್ಮ ಮಾಡಿದನು. ಸರ್ಕಾರ ದವರೂ ತಮಗಿರುವ ಅಧಿಕಾರವನ್ನು ದುರುಪಯೋಗ ಪಡಿಸಿದರೆ ಅದರಿಂದ ತಾವೇ ತೊಂದರೆಗೆ ಒಳಗಾಗು ತ್ತಾರೆ. ದಯವಿಟ್ಟು ರೈತರ ಮೇಲೆ ತೆರಿಗೆಯ ಹೊರೆ ಯನ್ನು ಕಡಮೆ ಮಾಡಬೇಕು.

ತೆರಿಗೆಯ ರೂಪದಲ್ಲಿ ತೆಗೆದುಕೊಂಡಂಥ ಹಣವನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸರಿಯಾಗಿ ಉಪ ಯೋಗಿಸುತ್ತ ಇಲ್ಲ. ಈ ವಿಚಾರವನ್ನು ಶ್ರೀ ರಾಮ ಚಂದ್ರರಾವ್ ಕಮಿಟಿ ರಿಪೋರ್ಟಿನಲ್ಲಿ ಸಹ ಹೇಳಿದ್ದಾರೆ.

"The rate of the growth of State economy under the two Plans is three and half per cent. The two Plans have not succeeded in accelarating the growth of the State economy to come up to the all-India level. *Per capita* income in the State continues to be lower than the all-India average by more than four per cent."

ತಾವು ದಯವಿಟ್ಟು ಇದನ್ನು ನೋಡಿ ಇನ್ನೂ ಒಂದು ವಿಷಯವನ್ನು ಹೇಳಿದ್ದಾರೆ.

"Although development expenditure represents 75 per cent of the total revenue expenditure in the State, development expenditure outside the Plan is nearly double the Plan expenditure."

ಎಂದು ಇದೆ.

ದಯವಿಟ್ಟು indiscriminate taxation ಹಾಕಿ, ಆ ಹಣವನ್ನೆಲ್ಲ Plan expenditureಗೆ ಉಪಯೋ ಗಿಸದೆ, non-plan expenditureಗೆ ಅದನ್ನು ಉಪಯೋಗಿಸಿ ರೈತರ ಮನೆ ಹಾಳು ಮಾಡಬೇಡಿ. ಇದು ಧರ್ಮವಲ್ಲ.

"Non-development expenditure constitutes 27 per cent of the total revenue expenditure and has been rising at the rate of Rs. 2 crores per year since States Reorganisation."

ಎಂದು ಇದೆ.

ಮಾನ್ಯ ರೆವೆನ್ಯೂ ಮಂತ್ರಿಗಳು ರೈತರ ಮೇಲೆ ತೆರಿಗೆಯನ್ನು ಹೆಚ್ಚು ಮಾಡಬಾರದು ನನ್ನ ಸಲಹೆ ಗಳನ್ನು ಕೇಳಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಒಂದು ವಿಷಯ ಚರ್ಚೆಯಲ್ಲಿ ವೇದ್ಯವಾದುದು ಏನೆಂದರೆ, ಈಗಾಗಲೇ ಎರಡು ಮಸೂದೆಗಳು ಬಂದಾಗ ಏನೇನು ಮಾತನಾಡಿದರೋ ಅದನ್ನೇ ವಿರೋಧಪಕ್ಷದ ನಾಯಕರು ಬಹುಮಟ್ಟಿಗೆ ಹೇಳಿ ದ್ದಾರೆ. ಇದುವರೆಗೂ ಶ್ರೀ ಎ. ಜಿ. ರಾಮಚಂದ್ರ ರಾಯರ ಸಮಿತಿಯ ವರದಿಯನ್ನು ಬಹಳವಾಗಿ ಟೀಕಿಸುತ್ತಿದ್ದರು. ಶ್ರೀ ರಾಮಚಂದ್ರರಾಯರ ಸಮಿತಿಯ ಶಿಫಾರಸುಗಳ ಪ್ರಕಾರ ನಾವು ತೆರಿಗೆ ಗಳನ್ನು ಹಾಕಬೇಕಾಯಿತು ಎಂದು ಹಣಕಾಸಿನ ಮಂತ್ರಿಗಳು ಹೇಳಿದ್ದಕ್ಕೆ ಶ್ರೀಮಾನ್ ರಾಮಚಂದ್ರ ರಾಯರನ್ನು ವಿಶ್ವಾಮಿತ್ರರನ್ನಾಗಿ ಮತ್ತು ಶ್ರೀಮಾನ್ ಜತ್ತಿಯವರನ್ನು ನಕ್ಷತ್ರಿಕನ ರೀತಿಯಲ್ಲಿ ಭಾವನೆ ಬರುವಂತೆ ಮಾತನಾಡಿದರು ಆದರೆ ಇವೊತ್ತು ಅವರ ವರದಿಯಿಂದಲೇ quote ಮಾಡುತ್ತಿದ್ದಾರೆ. ಈ ವರದಿಯಲ್ಲಿ stamp duty ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಇವರು ಹೇಳಿರುವು ದನ್ನು ಸರ್ಕಾರ ಗಮನಕ್ಕೆ ತಗೆದುಕೊಳ್ಳಲಿಲ್ಲ, ಇದು ಬಹಳ valuable report ಎಂದು ನಮ್ಮ ಮಾನ್ಯ ಮಿತ್ರರು ಹೇಳಿರುವುದನ್ನು ನೋಡಿದರೆ, ತಮಗೆ ಎಲ್ಲಿ ಅನುಕೂಲವಾಗುತ್ತದೆಯೋ ಅಲ್ಲಿ ಉಪಯೋಗಿಸಿ ಕೊಂಡು, ಎಲ್ಲಿ ಅನಾನುಕೂಲವಾಗುತ್ತದೆಯೋ ಅಲ್ಲಿ ಬಿಡುತ್ತಾರೆಂದು ಕಾಣುತ್ತದೆ. ಒಟ್ಟಿನಲ್ಲಿ ನಾನು ಈ ತೆರಿಗೆಯ ವಿಷಯದಲ್ಲಿ ಇದು ನ್ಯಾಯವಾದುದು, ಬಹಳ ಒಳ್ಳೆಯ ತೆರಿಗೆ ಎಂದು ಹೇಳುವುದಿಲ್ಲ. ಯಾವ ತೆರಿಗೆಯೂ ಒಳ್ಳೆಯದಾಗಿ ಕಾಣುವುದಿಲ್ಲ. ಎಲ್ಲ ತೆರಿಗೆಗಳೂ ಜನಗಳಿಗೆ ಕಷ್ಟ ಕೊಡುತ್ತವೆ; ಒಂದು ರೀತಿಯಲ್ಲಿ ಇಲ್ಲದೆ ಇದ್ದರೆ, ಮತ್ತೊಂದು ರೀತಿಯಲ್ಲಿ indirect ಆಗಿ ಇರುತ್ತವೆ. ತೆರಿಗೆಯಿಲ್ಲದೆ ಆಡಳಿತ ಮಾಡಲು ಯಾವ ಸರ್ಕಾರ ಬಂದರೂ ಆಗುವುದಿಲ್ಲ ವೆಂದು ನಮ್ಮ ಮಾನ್ಯ ಮಿತ್ರರೇ ಒಪ್ಪಿಕೊಳ್ಳುತ್ತಾರೆ. ತೆರಿಗೆಯಿಲ್ಲದೆ ರಾಜ್ಯವಾಳುವ ಸರ್ಕಾರ ಪ್ರಪಂಚದಲ್ಲಿ ಇದುವರೆಗೂ ಹುಟ್ಟಿಲ್ಲ, ಇನ್ನು ಮುಂದೆ ಹುಟ್ಟುವು ದಿಲ್ಲ. ನಾವು ಏನೇನು ಯೋಜನೆಗಳನ್ನು ಹಾಕಿ ಕೊಂಡಿದ್ದೇವೆಯೋ ಅವುಗಳನ್ನೆಲ್ಲ ಸಾಧಿಸಿ ಪ್ರಗತಿ ಪಥದಲ್ಲಿ ನಡೆಯಬೇಕಾದರೆ ತೆರಿಗೆ ಹಾಕದೆ ಆಗುವು ದಿಲ್ಲ. ಪ್ರಜಾಪ್ರಭುತ್ವದ ಅಡಿಗಲ್ಲು ಬದ್ಧವಾಗಲು ಪ್ಲಾನ್‌ಗಳನ್ನು ತಂದಿದ್ದೇವೆ. ಈ ಅಡಿಗಲ್ಲ ಮೇಲೆ ಪ್ರಜಾಪ್ರಭುತ್ವ ನಿಲ್ಲಬೇಕು. 44 ಕೋಟಿ ಬಡವರಿರುವ ಈ ದೇಶದಲ್ಲಿ ಮೊದಲನೆಯ ಮತ್ತು ಎರಡನೆಯ ಯೋಜನೆಗಳು ಮುಗಿದು ಈಗ ಮೂರನೆಯ ಯೋಜನೆ ನಡೆಯುತ್ತಿದೆ. ನಮ್ಮ ನಾಯಕರಾದ ಪ್ರಧಾನಿ ನೆಹರೂರವರು ಈ ಪ್ಲಾನ್ ಒಂದು ಹುಲಿ ಇದ್ದಂತೆ ಮತ್ತು ಆ ಹುಲಿಯ ಮೇಲೆ ನಾವು ಸವಾರಿ

ಮಾಡುತ್ತಿದ್ದೇವೆ ಎಂಬಂತಾಗಿದೆ, ನಾವು ಹುಲಿಯ ಮೇಲೆ ಕುಳಿತಿದ್ದೇವೆ. ಇಳಿದರೆ ಅದು ನಮ್ಮನ್ನು ತಿನ್ನುತ್ತದೆ. ಅದರ ಮೇಲಿನಿಂದ ಇಳಿಯದೆ ಇರಬೇಕು ಎಂದರೆ ಅದು ಎಷ್ಟು ಜೋರಾಗಿ ಹೋದರೂ ಅದನ್ನು ಹಿಡಿದುಕೊಂಡೇ ಇರಬೇಕು. ಆದುದರಿಂದ ಒಂದು ಪ್ಲ್ಯಾನ್ ಪ್ರಾರಂಭ ಮಾಡಿದ ಮೇಲೆ ಅದನ್ನು ಮುಂದುವರಿಸಲೇಬೇಕು. ಒಂದು ಕಡೆ ರಸ್ತೆ ಇರಲಿಲ್ಲವೆಂದರೆ ಮೊದಲು ಸಾಮಾನ್ಯವಾದ ರಸ್ತೆಯನ್ನು ಮಾಡುತ್ತೇವೆ, ಆ ಮೇಲೆ ಜಲ್ಲಿ ಹಾಕುತ್ತೇವೆ, ಆ ಮೇಲೆ ಟಾರ್ ಮಾಡಿಸುತ್ತೇವೆ. ಆ ಮೇಲೆ ರಸ್ತೆಯನ್ನು ಅಗಲ ಮಾಡಬೇಕಾಗುತ್ತದೆ. ಇದು ಮನುಷ್ಯನಿಗೆ ಸ್ವಭಾವತಃ ಬಂದಿರುವ ಗುಣ.

ಮೊದಲಿನ ಪ್ಲಾನಿಗೆ ಎಷ್ಟಿತ್ತೋ ಅದರ ಎರಡರಷ್ಟು ಎರಡನೆಯ ಯೋಜನೆಗೆ ಆಗಬೇಕು, ಮೂರರಷ್ಟು ಮೂರನೆಯ ಯೋಜನೆಗೆ ಆಗಬೇಕು ಎಂದು ಹೇಳಿದರು. ನಮ್ಮ ಮಿತ್ರರು ಪ್ರತಿಯೊಂದು ಪ್ರಶ್ನೆ ಹಾಕುವಾಗಲೂ ನಮ್ಮ ತಾಲ್ಲೂಕಿನಲ್ಲಿ ರಸ್ತೆ ಇಲ್ಲ, ಸೇತುವೆ ಇಲ್ಲ, ಕೆರೆ ಕಟ್ಟಿದ್ದರೂ ಅದು ಭದ್ರವಾಗಿಲ್ಲ ಎಂದು ಏನೇನೋ ಕೇಳುತ್ತಾರೆ. ಹಣವಿಲ್ಲದೆ ಯಾವ ಸರ್ಕಾರವೂ ರಾಜ್ಯವಾಳಲಾರದು. ಹಣವಿಲ್ಲದೆ ರಾಜ್ಯವಾಳುತ್ತೇವೆನ್ನುವವರು ಈ ಯುಗದಲ್ಲಿಲ್ಲ.

ಪೂರ್ವದಲ್ಲಿ no representation without taxation ಎಂದು ಹೇಳುತ್ತಿದ್ದರು ಈಗ No taxation without accusation ಎಂದು ಆಗಿದೆ. ಬಾಯಿಗೆ ಬಂದಂತೆ ಬಯ್ಯುತ್ತಾರೆ. ಮಂತ್ರಿಗಳು ಜಾಸ್ತಿಯಾದರು ಎಂದು ಹೇಳುತ್ತಾರೆ. ಮಂತ್ರಿಗಳಿಗಾಗಿ ಖರ್ಚಾಗುವುದು ನಾಲ್ಕೈದು ಲಕ್ಷ ರೂಪಾಯಿ ಮಾತ್ರ. ಹಣ ಖರ್ಚಾಗುವುದನ್ನು ಮಾತ್ರ ಮುಂದಿಟ್ಟು ಸರ್ಕಾರದವರು ಏನು ಮಾಡಿದ್ದಾರೆ ಎಂದು ಕೇಳುತ್ತಾರೆ, ಸ್ವಾತಂತ್ರ್ಯ ಬಂದ ಮೇಲೆ ಬೇಕಾದಷ್ಟು ಮಾಡಿದ್ದಾರೆ. ವಿಷಯ ತಿಳಿಯದೆ ಮಾನ್ಯ ಮಿತ್ರರು ಮಾತನಾಡುತ್ತಾರೆನ್ನುವುದು ಅರ್ಥವಾಗುತ್ತದೆ. ಈ ಭವ್ಯಭವನ ಸ್ವಾತಂತ್ರ್ಯ ಬಂದ ಮೇಲೆ ಕಟ್ಟಿರುವುದು. ನೀವು ಹೋಗುವ ಹಿಂದೂಸ್ತಾನ್ ಕಾರ್ ಸ್ವಾತಂತ್ರ್ಯ ಬಂದ ಮೇಲೆ ತಯಾರಾಗಿರುವುದು. ಲೇಲೆಂಡ್ ಬಸ್ ಮದ್ರಾಸಿನಲ್ಲಿ ಅಶೋಕ ಮೋಟಾರ್ಸ್ ಸಂಸ್ಥೆಯಿಂದ ಸ್ವಾತಂತ್ರ್ಯ ಬಂದ ಮೇಲೆ ತಯಾರಾದುದು.

ಲೆಜಿಸ್ಲೇಟರುಹೋಂಗಾಗಿ ತಾವೆಲ್ಲ ಮಲಗಲು ಅನುಕೂಲವಾಗುವಂತಹ ಭವ್ಯವಾದ ಕಟ್ಟಡವನ್ನು ಕಟ್ಟಲು ಲಕ್ಷಾಂತರ ರೂಪಾಯಿಗಳಷ್ಟು ಹಣ ಖರ್ಚು ಮಾಡಿರುವುದು ಈ ಪ್ಲಾನಿನಿಂದಲೇ ಕೊಟ್ಟಿದು. ನೀವು ಹೋಗುವ ರಸ್ತೆಗಾಗಿ ಟಾರು ಹಾಕಲು ಲಕ್ಷಾಂತರ ರೂಪಾಯಿಗಳನ್ನು ಪ್ಲಾನಿನಿಂದಲೇ ಖರ್ಚುಮಾಡಿದ್ದು. ಇಂತಹದನ್ನೆಲ್ಲಾ ಮಾಡಲು ಟ್ಯಾಕ್ಸುಗಳನ್ನು ಹಾಕಲೇ ಬೇಕಾಗುತ್ತದೆ. ಹಾಗೆ ಹಾಕುವಾಗ ಹೆಚ್ಚು ಹೆಚ್ಚಾಗಿ ಬಡವರ ಮೇಲೆ ಹಾಕಬೇಡಿ ಅವರನ್ನು ಉದ್ಧಾರಮಾಡಲು ಶ್ರೀಮಂತರ ಮೇಲೆ ಹೆಚ್ಚಾಗಿ ಹಾಕಬೇಕೆಂದು ಹೇಳಿದ್ದಾರೆ. ಬಡವರನ್ನುದ್ಧಾರ ಮಾಡಲು ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಗಳನ್ನು ಹಾಕಬೇಕೆಂದು ಎಲೆಕ್ಷನ್ನಿನಲ್ಲಿ ಭಾಷಣ ಮಾಡುವಂತೆ ಇಲ್ಲಿಯೂ ಹೇಳುತ್ತಿದ್ದಾರೆ. ಹೀಗಾದರೆ ಬಡವರನ್ನು ಪ್ರಗತಿ ಪಥದಲ್ಲಿ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಈ ರೀತಿಯಾಗಿ ಟ್ಯಾಕ್ಸುಗಳನ್ನು ಹಾಕುತ್ತೇವೆಂದು ಜನಗಳಲ್ಲಿ ಎಲೆಕ್ಷನ್ನಿಗೆ ಮೊದಲು ಹೇಳಿದ್ದರೆ ಯಾರೂ ವೋಟು ಕೊಡುತ್ತಿರಲಿಲ್ಲ. ಹಾಗೆ ಕೊಡದಿದ್ದರೆ ನಾವ್ಯಾರೂ ಇಲ್ಲಿ ಬರುವುದಕ್ಕಾಗುತ್ತಿರಲಿಲ್ಲ ಎಂದು ಬಹಳ ಚೆನ್ನಾಗಿ ಇಲ್ಲಿ ಹೇಳಿದ್ದಾರೆ. ಟ್ಯಾಕ್ಸುಗಳನ್ನು ಹಾಕದೇ ನಾವು ರಾಜ್ಯವನ್ನು ಆಳುತ್ತೇವೆಂದು ನಾವು ಎಲ್ಲಿಯೂ ಹೇಳಿಲ್ಲ. ಮೂರನೆಯ ಯೋಜನೆಗಾಗಿ 250 ಕೋಟಿ ಇದೆ. ಇದಕ್ಕೆ ಕೇಂದ್ರದವರು ಸ್ವಲ್ಪ ಕೊಡುತ್ತಾರೆ. ನಮ್ಮ ಸರಕಾರವೂ ಸಹ ಹಣ ಒದಗಿಸಿದೆ. ಆದರೆ ಇದಕ್ಕಾಗಿ ಸುಮಾರು ನಲವತ್ತೆರಡು ಕೋಟಿಯಷ್ಟು ಹಣ ಬೇಕಾಗಿರುವುದರಿಂದ ಅದನ್ನು ಜನಗಳ ಮೇಲೆ ಹಾಕಬೇಕಾಗಿದೆ. ಆದರೆ ಈರೀತಿ ಜನಗಳ ಮೇಲೆ ತೆರಿಗೆ ಹಾಕಬಾರದು ಎಂದು ಪದೇ ಪದೇ ಹೇಳುತ್ತಿದ್ದಾರೆ. ಈರೀತಿಯಾಗಿ ತೆರಿಗೆಗಳನ್ನು ಹಾಕುತ್ತಾರೆಂದು ವಿದ್ಯಾವಂತರಾದ ನಿಮಗೂ ಮತ್ತು ನಮಗೂ ಗೊತ್ತೇ ಇದೆ. ಮೂರನೇ ಯೋಜನೆಗಾಗಿ 42 ಕೋಟಿಯಷ್ಟು ರೂಪಾಯಿಗಳು ಬೇಕಾಗಿರುವಾಗ additional taxation ನಿಂದ ನಾವು ಎತ್ತಲೇಬೇಕು. ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಕಾಂಗ್ರೆಸ್ಸು ಪಕ್ಷದವರು ಏನುಮಾಡಿದ್ದಾರೆ. ಎಂದು ಕೇಳಿದರು, ಸ್ವತಂತ್ರ ಬಂದ ಮೇಲೆ ಭಾಕ್ರನಂಗಲ್ ಯೋಜನೆಯಾಯಿತು, ತುಂಗಭದ್ರ ಯೋಜನೆಯಾಯಿತು, ಡಿ.ವಿ.ಸಿ. ಯೋಜನೆಯಾಯಿತು. ಮಲಂಪೂಸಾ ಪ್ರಾಜೆಕ್ಟು ಇತ್ಯಾದಿ ಭಾರಿ ಭಾರಿ ಯೋಜನೆಗಳನ್ನು ಮಾಡಲಾಗಿದೆ. ಇದಕ್ಕಾಗಿ ನಾವು ಕಂದಾಯವನ್ನು ಹಾಕುತ್ತೇವೆ. ಹೀಗೆ ಕಂದಾಯ ಹಾಕುತ್ತೇವೆಂದು ಮೊದಲೇ ಜನಕ್ಕೆ ಹೇಳಿದ್ದರೆ, ಜನ ವೋಟು ಕೊಟ್ಟು ಕಳುಹಿಸುತ್ತಿರಲಿಲ್ಲ ಎಂದು ಹೇಳಿದರು. ಹಾಗೆ ಹೇಳದೆ ವೋಟು ತೆಗೆದುಕೊಂಡು ಇಲ್ಲಿ ಮಂತ್ರಿಗಳಾಗಿ ಬಂದಿದ್ದಾರೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಸತ್ಯಕ್ಕೆ ಬಹಳ ದೂರವಾದ ಮಾತು. ಟ್ಯಾಕ್ಸೇಷನ್ನು ಇಲ್ಲದೆ ಯಾವ ಸರಕಾರವೂ ನಡೆಯುವುದಿಲ್ಲ. ಇದು ಜನಕ್ಕೆ ಗೊತ್ತಾಗಿದೆ. ಅದನ್ನೆಲ್ಲಾ ತಿಳಿದೇ ವೋಟು ಕೊಟ್ಟಿದ್ದಾರೆ. ದೇಶದ ರೆವೆನ್ಯೂ ಮಂತ್ರಿಯಾಗಿ ಕೃಷ್ಣಪ್ಪನವರೇ ಇರಲೀ ಯಾರೇ ಇರಲಿ, ಕಂದಾಯದ ಮಂತ್ರಿಗಳಾಗಿರುವವರು ಕಂದಾಯವನ್ನು ಹಾಕಿಯೇ ರಾಜ್ಯವನ್ನು ಆಳಬೇಕು. ನಾನೇನೋ ಡೆಲ್ಲಿಯಲ್ಲಿ ಒಳ್ಳೆಯ ಹೆಸರನ್ನು ಪಡೆದಿರಬಹುದು. ಆದರೆ ಇಲ್ಲಿ ಕಂದಾಯದ ಮಂತ್ರಿಗಳಾಗಿ ಕಂದಾಯ ಹಾಕಿ ಕೆಟ್ಟ ಹೆಸರು ಪಡೆಯುತ್ತಾರೆ ಎಂದು ಹೇಳಿದರೆ ಅದು ಯಾವ ನ್ಯಾಯ. ಇದನ್ನೆಲ್ಲಾ ತಾವೇ ವಿಮರ್ಶೆ ಮಾಡಬೇಕು. ಕಂದಾಯವನ್ನು ಹಾಕದೇ ದೇಶವನ್ನಾಳುವುದಕ್ಕೆ ಬೇರೆ ಮಾರ್ಗವೇ ಇಲ್ಲ. ಜನಗಳನ್ನು ಸುಖಕರವಾಗಿಡಬೇಕೆಂದರೆ ಆ ರೀತಿ ಮಾಡಲು ಟ್ಯಾಕ್ಸೇಷನ್ನು ತರದೇ ಬೇರೆ ಮಾರ್ಗವಿಲ್ಲ. ಬಡವರ ಮೇಲೆ ಏಕೆ ಹಾಕುತ್ತೀರಿ, ಶ್ರೀಮಂತರ ಮೇಲೆ ಹಾಕಬೇಕೆಂದು ಹೇಳಿದ್ದಾರೆ, ಹಾಗೆ ಮಾಡುವುದಕ್ಕಾಗುವುದಿಲ್ಲ. ಸಾಧ್ಯವಾದಷ್ಟು ಬಡವರಿಗೆ ಹಾಕಬೇಕೆಂದಲ್ಲ, ಬಡವರಾಗಿರುವವರು ಹೆಚ್ಚಾಗಿ ಪ್ರಾಪರ್ಟಿಗಳನ್ನು ಮಾಡುವುದಿಲ್ಲ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಮಾಡುವಾಗ ಅದಕ್ಕೆ ತಕ್ಕಷ್ಟು ಫೀಜನ್ನು ಕೊಡಬೇಕಾಗುತ್ತದೆ. ಈರೀತಿಯಾಗಿರುವ ಜನ ನಮ್ಮಲ್ಲಿ ಶೇಕಡಾ ಹತ್ತು, ಹದಿನೈದರಷ್ಟು ಕೂಡ ಇಲ್ಲ. ಮನೆಗಳನ್ನು ಮಾಡಿರುವ ಮಾಲೀಕರು ಅದನ್ನು ಮಾರುವಾಗ ಅವರಿಂದ ರಿಜಿಸ್ಟ್ರೇಷನ್ ಫೀಸನ್ನು ವಸೂಲು ಮಾಡುತ್ತಾರೆ. ಇದೆಲ್ಲ ಪಕ್ಷದ ವಿಷಯವಲ್ಲ, ಯಾವ ಸರಕಾರವೇ ಆಗಲೀ ದೇಶವನ್ನು ಎಷ್ಟೆಷ್ಟು ಪ್ರಗತಿಯುತವಾಗಿ ಮಾಡಬೇಕೋ ಅಷ್ಟನ್ನು ಮಾಡಬೇಕಾಗುತ್ತದೆ. ಇದಕ್ಕಾಗಿ ಸಾಧ್ಯವಾದಷ್ಟೂ ಶ್ರೀಮಂತರ ಮೇಲೆಯೇ ತೆರಿಗೆ ಹಾಕಿ,

(ಶ್ರೀ ಎಂ. ವಿ. ಕೃಷ್ಣಪ್ಪ)

ಬಡವರ ಮೇಲೆ ಹಾಕಬೇಡಿ ಎನ್ನುವುದು ಅದು ಹೇಗಾಗುತ್ತದೆ ಎಂದರೆ, ಯಾವುದೋ ಒಂದೂರಿನಲ್ಲಿ ಹಿಂದೆ ಒಬ್ಬ ಶ್ಯಾನುಭೋಗರಿದ್ದರಂತೆ. ಅವರಿಗೆ ಅಲ್ಲಿದ್ದ ಅಮಲ್ದಾರರು ಈ ಶ್ಯಾನುಭೋಗರಿಗೆ ಇನ್ನೂರು ರೂಪಾಯಿ ಫೈನ್ ಹಾಕಿದರು. ಆಗ ಆ ಶ್ಯಾನುಭೋಗರು ಬಡವರ ಮೇಲೆ ಹೀಗೆ ಹಾಕುವುದು ನ್ಯಾಯವೇ ಎಂದು ಕೇಳಿದರಂತೆ! ಮತ್ತು ಈ ಜುಲ್ಮಾನೆ ಹಣವನ್ನು ಬಡವರಿಂದಲೇ ಅವರು ವಸೂಲು ಮಾಡುತ್ತಾರೆ. ಇನ್ನೂರು ಜುಲ್ಮಾನೆ ಇದ್ದರೆ ನಾನೂರು ರೂಪಾಯಿಗಳನ್ನು ವಸೂಲುಮಾಡಿಕೊಳ್ಳುತ್ತಾರೆ. ಹಾಗೆ ಇವರು ಇದು ಬಡವರ ಮೇಲೆ ಬೀಳುತ್ತೆ ಎಂದು ಹೇಳುತ್ತಿದ್ದಾರೆ. ಆದರೆ ಡೈರೆಕ್ಟ್ ಆಗಿ ಇಲ್ಲದಿದ್ದರೆ, ಇಂಡೈರೆಕ್ಟ್ ಆಗಿ ಬಡವರ ಮೇಲೆ ಬರುತ್ತದೆ, ಇಲ್ಲವೆಂದು ಯಾರು ಹೇಳುವುದಕ್ಕಾಗುವುದಿಲ್ಲ. ಸಾಧ್ಯವಾದಷ್ಟು ಶ್ರೀಮಂತರ ಮೇಲೆ ಬೀಳುತ್ತದೆ. ಬೆಂಗಳೂರಿನಲ್ಲಿ ಕೆಲವರು ಕೋಟ್ಯಾಂತರ ರೂಪಾಯಿಗಳಷ್ಟು ಸೈಟುಗಳನ್ನ ಬಿಸಿನೆಸ್ ಮಾಡುತ್ತಿದ್ದಾರೆ. ಸೈಟಿನ ಬೆಲೆ ಹತ್ತು ಸಾವಿರವಿದ್ದರೆ ಅದನ್ನು ಇಪ್ಪತ್ತೈದು ಸಾವಿರಕ್ಕೆ ಮಾರುತ್ತಿದ್ದಾರೆ. ಅಂತಹವರು ಪತ್ರವನ್ನು ರಿಜಿಸ್ಟರು ಮಾಡುವಾಗ ಸಾವಿರಾರು ರೂಪಾಯಿಗಳಷ್ಟು ಹಣ ಕೊಡಬೇಕಾಗುತ್ತದೆ. ಹೀಗೆ ಕೋಟ್ಯಾಂತರ ರೂಪಾಯಿಗಳ ಸೈಟುಗಳನ್ನು ಮಾರುವವರು ಬಡವರಲ್ಲ. ಸಾಮಾನ್ಯನಾದವನೊಬ್ಬ ಇಪ್ಪತ್ತೈದು ರೂಪಾಯಿಗಳಷ್ಟು ಸಾಲವನ್ನು ಪಡೆಯುವಾಗ 5 nP. ನಿಂದ 10 nP. ಎಂದಿದ್ದುದು ಈಗ 15 nP.—25 nP. ಎಂದಾಗಿರುವಾಗ ಅದರಂತೆ ಕೊಡಬೇಕಾಗುತ್ತದೆ. ಎರಡು ಕೋಟಿ ಜನರ ಮೇಲೆ ಎರಡು ಕೋಟಿಯಷ್ಟು ತೆರಿಗೆ ಹಾಕಿದ್ದರೆ ಒಬ್ಬೊಬ್ಬರ ಮೇಲೆ ಕೇವಲ ಒಂದು ರೂಪಾಯಿನಷ್ಟು ಬೀಳಬಹುದು. ಎಂಟರ್‌ಟೇನ್‌ಮೆಂಟ್ ಟ್ಯಾಕ್ಸನ್ನು ಹಾಕಬೇಕೆಂದು ತಂದಾಗ ಶ್ರೀಮಾನ್ ಶಿವಪ್ಪನವರು ಅವರ ಭಾಷಣದಲ್ಲಿ ಸಿನಿಮಾಕ್ಕೆ ಹೋಗುವವರೇ ಇರುವುದಿಲ್ಲ ಎಂದು ಹೇಳಿದರು. ಬಡವರಾಗಿರುವವರು ಒಂದು ದಿನ ಸಿನಿಮಾಕ್ಕೆ ಹೋಗುವುದನ್ನು ಬಿಟ್ಟು ಒಂದು ರೂಪಾಯಿಯನ್ನು ಕೊಡಬಹುದು, ಕೊಡಲು ಶಕ್ಯವಿದೆ.

ಶ್ರೀ ಎಸ್. ಶಿವಪ್ಪ.—ಎರಡು ದಿನದ ಊಟವನ್ನು ಬಿಟ್ಟರೂ ಆಗುತ್ತದೆ. (ನಗು)

ಶ್ರೀ ಎಂ. ವಿ. ಕೃಷ್ಣಪ್ಪ.—ಒಳ್ಳೆ[illegible]ತ್ತೆ ಆಗಬೇಕು, ಅದಕ್ಕೆ ಟಾರನ್ನು ಹಾಕಬೇಕು ಎಂದು ಪ್ಲಾನುಗಳನ್ನು ಮಾಡುತ್ತಿದ್ದೇವೆ. ತುಂಗಭದ್ರಾ ಪ್ರಾಜೆಕ್ಟ್, ಘಟಪ್ರಭಾ ಪ್ರಾಜೆಕ್ಟ್, ಇವೆಲ್ಲವನ್ನೂ ಕಟ್ಟದೇ ಇದ್ದರೆ ಜನ ಉಪವಾಸ ಇರಬೇಕಾಗಿತ್ತು. ಈಗಿರುವ ಸ್ಥಿತಿಯನ್ನು ಜನ ವೋಟು ಕೊಡುವಾಗ ತಿಳಿದೇ ಕೊಟ್ಟಿದ್ದಾರೆ.

ಶ್ರೀ ವಿ. ಎಂ. ದೇವ್.—ಆದರೆ ನೀರಾವರಿ ಕಡಮೆಯಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಬಂದ ಮೇಲೆ 35 ಕೋಟಿ ಎಕರೆಗಳಷ್ಟು ನೀರಾವರಿಯಾಗುವುದರಲ್ಲಿ 5 ಕೋಟಿ ಎಕರೆಗಳಷ್ಟು ಆಯಿತು. ಅದು ಈಗ ಒಂಬತ್ತು ಕೋಟಿಯಷ್ಟು ಆಗಿದೆ. ಎಂದರೆ ನಾಲ್ಕು ಕೋಟಿಯಷ್ಟು ಎಕರೆ ಹೆಚ್ಚಾಯಿತು. ತುಂಗಭದ್ರಾ ಪ್ರಾಜೆಕ್ಟಿನಿಂದಾಗಿ ಎಷ್ಟೋ ಲಕ್ಷ ಎಕರೆಗಳಷ್ಟು ನೀರಾವರಿಗೆ ಅನುಕೂಲವಾಯಿತು. ಹಾಗೇ ಘಟಪ್ರಭಾ ಯೋಜನೆಯಿಂದ ನೀರಾವರಿಗನುಕೂಲವಾಗಿದೆ. ಭಾಕ್ರಾನಂಗಲ್, ಹೀರಾಕೂಡ್, ಇವುಗಳಿಂದ ಸುಮಾರು ನಲವತ್ತು ಲಕ್ಷ ಎಕರೆಗಳಷ್ಟು ಭೂಮಿಗನುಕೂಲವಾಗಿದೆ. ಲೋವರ್ ಭವಾನಿ ಪ್ರಾಜೆಕ್ಟಿನಿಂದ ನಾಲ್ಕು ಲಕ್ಷ ಎಕರೆ ಭೂಮಿಗನುಕೂಲವಾಯಿತು. ಮಲಂಪೂಜಾ ಪ್ರಾಜೆಕ್ಟಿನಿಂದಾಗಿ ಸುಮಾರು ಎರಡು ಲಕ್ಷ ಎಕರೆಗಳಷ್ಟು ಭೂಮಿಗನುಕೂಲವಾಯಿತು. ಭಾಕ್ರಾನಂಗಲ್ ಯೋಜನೆಯಿಂದಾಗಿ, ಒಂದು ಕೋಟಿ ಎಕರೆಗಳಷ್ಟು ಭೂಮಿ ಸಾಗುವಳಿಗೆ ಬಂದಿದೆ. ಇನ್ನೂ ಐವತ್ತು ಲಕ್ಷ ಎಕರೆಯಷ್ಟು ಭೂಮಿಗೂ ಅನುಕೂಲವಾಗುತ್ತದೆ. ಹಿಂದೆ ಐದು ಕೋಟಿ ಎಕರೆಯಷ್ಟು ಭೂಮಿ ಇದ್ದದ್ದು ಈಗ ನಾಲ್ಕು ಕೋಟಿಯಷ್ಟು ಎಕರೆ ಭೂಮಿಯು ನೀರಾವರಿ ಹೆಚ್ಚಾಗಿದೆ. ಸ್ವಾತಂತ್ರ ಬಂದ ಮೇಲೆ ಇರಿಗೇಷನ್ ಫೆಸಿಲಿಟೀಸ್‌ಗಳು ಹೆಚ್ಚಾಗಿದೆ.

ನಮ್ಮ ಸಂಸ್ಥಾನದಲ್ಲೂ ಕೂಡ ಈಗ ರೈತರಿಗಾಗಿ, ಬಾವಿಗಳನ್ನು ಮಾಡಿಕೊಳ್ಳಲು ಸಾಲವನ್ನು ಹೆಚ್ಚಿಗೆ ಕೊಡಬೇಕೆಂದು ತೀರ್ಮಾನಮಾಡಿದ್ದೇವೆ. ಅದರ ಬಗ್ಗೆ ಪ್ರಕಟಣೆ ಇನ್ನು ಎರಡು ಮೂರು ದಿನದಲ್ಲಿ ಬರಬಹುದು. ಇದರಿಂದ ಸುಮಾರು ಐದಾರು ಲಕ್ಷ ಎಕರೆಗಳಷ್ಟು ಭೂಮಿಗೆ ಈ ಬಾವಿಗಳಿಂದ ಅನುಕೂಲವಾಗುತ್ತದೆ. ಇದಕ್ಕೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟು ಹಣವನ್ನು ಮಂಜೂರು ಮಾಡಲಾಗಿದೆ. ಒಂದು ಬಾವಿಗಾಗಿ ಸುಮಾರು ಮೂರು ಸಾವಿರದಷ್ಟು ಹಣವನ್ನು ಸಾಲವಾಗಿ ಕೊಡುತ್ತೇವೆ. ಅದರಲ್ಲಿ 500 ರೂಪಾಯಿಗಳಷ್ಟು ಸಬ್‌ಸಿಡಿ ಎಂದು ಕೊಡುತ್ತೇವೆ. ಇದರಂತೆ ಎಲ್ಲ ಹಳ್ಳಿಗಳಿಗೂ ಕೊಡುತ್ತೇವೆ. ಈ ಬಗ್ಗೆ ತೀರ್ಮಾನ ತೆಗೆದುಕೊಂಡು ಒಂದೂವರೆ ಕೋಟಿಯಷ್ಟು ಹಣವನ್ನು ಇದಕ್ಕಾಗಿ ಒದಗಿಸಲಾಗಿದೆ. ನಮ್ಮ ಕಾಂಗ್ರೆಸ್ಸು ಪಕ್ಷದವರು ಏನೂ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ಇದು ನಮ್ಮ ಅಪ್ಪನ ದುಡ್ಡೂ ಅಲ್ಲ. ನಿಮ್ಮಪ್ಪನ ದುಡ್ಡೂ ಅಲ್ಲ. ಇದೆಲ್ಲಾ ದೇಶದ ದುಡ್ಡು. ಆ ದೇಶದ ದುಡ್ಡನ್ನು ನ್ಯಾಯವಾದ ದಾರಿಯಲ್ಲಿ ಖರ್ಚಾವಡಬೇಕೆಂದು, ಅದರಂತೆ ಮಾಡುತ್ತಿದ್ದೇವೆ.

ಶ್ರೀ ವಿ. ಎಂ. ದೇವ್.—ಈಗ ಮೈಸೂರು ರಾಜ್ಯದಲ್ಲ ತರಿವ್ಯವಸಾಯದ ಭೂವಿಸ್ತೀರ್ಣ ಕಡಮೆಯಾಗಿದೆ ಎಂದು ಇಲ್ಲಿ ಹೀಗೆ ಹೇಳಿರುತ್ತದೆ. According to the Census Report, despite the construction of a large number of irrigation projects, the overall irrigable capacity in the State has been actually reduced. It says that the actual situation has yet to be assessed.

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗೆ yet to be assessed ಎಂತ ಯಾವುದೋ ಪೇಜಿನಲ್ಲಿ ಹಾಗೆ ಬರೆದಿರಬಹುದು. ಆದರೆ ಆ ಅಂಶವನ್ನು ಯಾವ ರೆಫರೆನ್ಸಿಗೆ ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಲಾಗಿರುತ್ತೆಂಬುದನ್ನು ಗಮನಕ್ಕೆ ತೆಗೆದುಕೊಳ್ಳದೆ ಓದಿದರೆ ಏನು ಪ್ರಯೋಜನ? ಈಗ ಇಂಡಿಯಾ ದೇಶದಲ್ಲಿ ಒಟ್ಟು 4 ಕೋಟಿ ಎಕರೆಗಳಷ್ಟು ಹೆಚ್ಚಿನ ವಿಸ್ತೀರ್ಣ ನೀರಾವರಿಯಾಗಿರುತ್ತೆ. ತುಂಗಭದ್ರ ಪ್ರಾಜೆಕ್ಟಿನ ಕೆಳಗೆ $2\frac{1}{2}$ ಲಕ್ಷ ಎಕರೆ, ಭದ್ರಾ ಜಲಾಶಯದ ಕೆಳಗೆ $2\frac{1}{2}$ ಲಕ್ಷ ಎಕರೆ ನೀರು ಸಾಗಿಗೆ ಬಂದಿದೆ. ಇದರ ನಾಲೆ ಹರಿಹರದವರೆಗೂ ಬಂದಿದೆ. ಆ ತುಂಗ ಭದ್ರೆ ಡ್ಯಾಮಿಗೆ ಸುಮಾರು 100 ಕೋಟಿ ರೂ. ಗಳು ಖರ್ಚಾಗಿದೆ. ಅಲ್ಲೀಗ ಸುಮಾರು 12 ಲಕ್ಷ ಎಕರ

ತರೀ ಸಾಗುವಳಿಗೆ ಬರುತ್ತದೆ. Thunga Bhadra Dam is not a falsehood. Bhadra project is not a falsehood. ಇನ್ನು ಶ್ರೀಮಾನ್ ವಿ. ಎಸ್. ಪಾಟೀಲರು ಎರಡು ಮೂರು ವಿಚಾರ ಹೇಳಿದ್ದಾರೆ.

By this amendment the lawyers are not to pay more. In fact the accusation is that they ought to have been asked to pay more. Let the Bar Council have this Rs. 250 to equip their library, etc. To safeguard democracy, the lawyers should be trained well.

With these words, I commend the Bill for the consideration of the House.

Sri SANJEEVANATH AIKALA.—Sir, the Minister said in the course of his reply that only in planned States, certain benefits had accrued. Then, what about States where there are no plans ? They are getting more benefits and many welfare schemes have been developed.

Mr. SPEAKER.—To which country is the Hon'ble Member referring ?

Sri SANJEEVANATH AIKALA.—For example, Burma, Ceylon.

Sri M. V. KRISHNAPPA.—Had the Hon'ble Member gone to Burma and seen conditions there ?

Sri SANJEEVANATH AIKALA.—I have not gone but I have heard reports.

Mr. SPEAKER.—The question is :

> "That the Mysore Stamp (Amendment) Bill, 1962, be taken into consideration"

The motion was adopted.

Mr. SPEAKER.–Now consideration of clauses Sri V. S. Patil has moved an amendment, item No. 3. This is the definition given in most of the Acts. The wording is identical.

Sri V. S. PATIL.—I do not wish to move amendment No. 3.

Mr. SPEAKER.—Then amendment No. 4 by Sri Venkatai Gowda.

Sri G. V. GOWDA.—I beg to move :

> "That the proposed item (iii) of clause (*k*) shall be deleted".

Mr. SPEAKER.—Amendment moved:

> "That the proposed item (iii) of clause (*k*) shall be deleted".

†ಶ್ರೀ ಜಿ. ವಿ. ಗೌಡ (ಪಾಳ್ಯ).—ಸ್ವಾಮಿ ನಾನು ಈ ತಿದ್ದುಪಡಿಯನ್ನು ತಂದಿರತಕ್ಕ ಉದ್ದೇಶ ಇಷ್ಟೆ: ಕೆಲವು ಸಣ್ಣ-ಪುಟ್ಟ ಸಂಸಾರಗಳಲ್ಲಿ ಸ್ಟ್ಯಾಂಪ್ ಡ್ಯೂಟಿ ಕೊಡದೆ ಹಾಗೆ ಒಂದು ಸಾದಾ ಕಾಗದದ ಮೇಲೆ ತಮ್ಮ ಆಸ್ತಿಯನ್ನು ಇಬ್ಬರು-ಮೂವರು ಹಂಚಿಕೊಂಡರೆ ಅಂಥವರ ಮೇಲೂ ನಾಳೆ ಈ ತೆರಿಗೆ ಬೀಳುತ್ತದೆ. ಇಲ್ಲಿಯು ತನಕ ಅವರಿಗೆ ಈ ಸ್ಟ್ಯಾಂಪ್ ಡ್ಯೂಟಿ ಬೀಳುತ್ತಿರಲಿಲ್ಲ. ಹಿಂದಿನಿಂದಲೂ ಹೀಗೆ ಸಣ್ಣ-ಪುಟ್ಟ ಸಂಸಾರಗಳಲ್ಲಿರತಕ್ಕವರು ಅವರವರ ಆಸ್ತಿಯನ್ನು ವಿಭಾಗ ಮಾಡಿಕೊಂಡಾಗ ಅವರು ಯಾವ ದಸ್ತಾವೇಜನ್ನೂ ಮಾಡಿಸುತ್ತಿರಲಿಲ್ಲ. ಹೀಗೆ ದಸ್ತಾವೇಜನ್ನು ರೆಕಾರ್ಡು ಮಾಡದೇನೇ ತಮ್ಮ ಭಾಗಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ರೆಕಾರ್ಡು ಮಾಡಿಸಿಕೊಳ್ಳುತ್ತಿದ್ದರು. ಇದೆಲ್ಲ ಖಾಲಿ ಕಾಗದ ಪತ್ರಗಳಲ್ಲಿ ನಡೆದುಕೊಂಡು ಬರುತ್ತಿತ್ತು. ಇನ್ನು ಮುಂದೆ ಇವರು ತಮ್ಮ ತಮ್ಮ ಹಕ್ಕಿನ ಜಮೀನನ್ನು ಅವರವರ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಹೊರಟರೆ ಅವರು ಈಗ ಸ್ಟ್ಯಾಂಪ್ ಡ್ಯೂಟಿಯನ್ನು ಕೊಡಬೇಕಾಗಿದೆ. ಹಿಂದೆ ಜಾರಿಯಲ್ಲಿಲ್ಲದಂಥ ವಿಷಯದ ಮೇಲೆ ಈಗ ಈ ಡ್ಯೂಟಿ ಹಾಕುವುದು ಅಷ್ಟು ಸಮಂಜಸವಾಗಿರುವುದಿಲ್ಲವೆಂಬುದು ನನ್ನ ಅಭಿಪ್ರಾಯ. ಹಿಂದಿನ ಸ್ಟ್ಯಾಂಪ್ ಆಕ್ಟಿನಲ್ಲಿ ಈ ವಿಚಾರ ಇರಲಿಲ್ಲ. ಆದ್ದರಿಂದ ಈಗ ಈ ಬಿಲ್ಲಿನಲ್ಲೂ ಈ ವಿಚಾರವನ್ನು ಸೇರಿಸಬಾರದೆಂದು ಹೇಳುತ್ತೇನೆ. ಇದನ್ನು ಕೈಬಿಟ್ಟರೆ ಸರ್ಕಾರಕ್ಕೆ ಬರತಕ್ಕ ವರಮಾನಕ್ಕೇನೂ ಧಕ್ಕೆ ಬರುವುದಿಲ್ಲ. ಆದ್ದರಿಂದ ಮಾನ್ಯ ಸಚಿವರು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಟ್ಯಾಕ್ಸ್ ಇವೇಷನ್ ತಪ್ಪಿಸಲು ನಾವೀಗ ಈ ಕ್ಲಾಜನ್ನು ಸೇರಿಸಿದ್ದೇವೆ. ಆದ್ದರಿಂದ ಈಗ ಹಾಲಿ ಇರತಕ್ಕದ್ದೇ ಸರಿಯಾಗಿದೆ.

Mr. SPEAKER.—Does this definition in Clause (k) make a distinction between the rich and the poor, between the big and small property-holder under a partition ?

Sri G. V. GOWDA.—So far as partition between big people is concerned, it cannot escape notice. One way or the other, it would come to light. Otherwise they will have to pay income-tax. But item 'k' will affect partition among small holders also. They may not execute a deed as such, but may write out chits or bits of paper. According to the amendment of the Revenue Minister, even such partitions would be attracted, and stamp duty imposed.

Mr. SPEAKER.—The question is:

> "That the proposed item (iii) of clause (*k*) shall be deleted."

The motion was negatived.

Sri S. SIVAPPA.—I press for a division.

Mr. SPEAKER.—After I have declared it as negatived, the Hon'ble Member cannot press for a division. He should ask for it at the appropriate

(MR. SPEAKER)

time. I repeated three times: "those in favour will say 'ayes'". It is at that stage, that the Hon'ble Member can press for a division; not after I have announced the result.

Sri S. SIVAPPA.—I rose as the Speaker was saying "ayes' have it.'

Mr. SPEAKER.—After I had declared 'ayes have it' there can be no division. That is why I say that 'I think that ayes have it'.

Sri S. SIVAPPA.—After the Speaker said 'ayes have it' I pressed for division.

Mr. SPEAKER.—Let him not contradict me. I cannot permit division now. I said it twice. After I declare that it is passed, the member cannot get up and say 'I press for a division'.

Sri S. SIVAPPA.—At that time I asked for a division. I would again press for a division.

Mr. SPEAKER.—I cannot allow it. The privilege has to be exercised at the appropriate time. The Hon'ble Member has to be a little more cautious. I will also give a little more time before I announce the results.

5-30 P.M.

Sri V. S. PATIL.—I beg to move:

That in the proposed item (iii) of clause (*k*) between the words 'partition' and 'or otherwise' the words 'or allotments of sharers or any property to a sharer' shall be inserted.

Mr. SPEAKER.—Amendment moved:

"That in the proposed item (iii) of clause (*k*) between the words 'partition' and 'or otherwise', the words 'or allotments of sharers or any property to a sharer' shall be inserted."

†Sri V. S. PATIL.—The sub-clause reads as follows:

"That when any partition is effected without executing any such instrument, any instrument or instruments signed by the co-owners and recording, whether by way of declaration of such partition or otherwise, the terms of such partition amongst the co-owners."

The word 'otherwise' here, is too vague. It may convey several meanings. In order to specify what the intention of the Legislature is, let us make it clear and specific. That is why I have suggested that the words "or allotments of sharers of any property to a sharer" be added. That will make matters easy.

Sri M. V. KRISHNAPPA.—I cannot agree to it, Sir.

Mr. SPEAKER.—The question is:

"That in the proposed item (iii) of clause (*k*) between the words 'partition' and 'or otherwise', the words 'or allotments of sharers or any property to a sharer' shall be inserted."

The motion was negatived.

Mr. SPEAKER.—The question is:

"That clause 2 stand part of the Bill."

The motion was adopted.

Clause 2 was added to the Bill.

Mr. SPEAKER.—The question is:

"That clauses 3 and 4 stand part of the Bill."

The motion was adopted.

Clauses 3 and 4 were added to the Bill.

Sri V. S. PATIL.—I beg to move:

'That in the proviso to the proposed new section (3A), line (5) after the words "a fraction of five naye paise" the words "if the fraction is more than three naye paise" shall be added.'

Mr. SPEAKER.—Amendment moved:

'That in the proviso to the proposed new section (3A) line (5) after the words "a fraction of five naye paise" the words "if the fraction is more than three naye paise" shall be added.'

†**Sri V. S. PATIL.**—While speaking on the Bill generally, I have referred to this matter. I think the Hon'ble Minister and the Government will agree with me that we must be equitable in all matters. We should not try to squeeze out money by any means. This is a way in which we are trying to dupe the people and grab money. It is unfair and it may not be called good money but money got by force by making a law unconscionable and inequitable. That is why I say that if the fraction is below 3 nP. it should be given up. By this, the Government is not going to lose. This is a most equitable proposal brought before the House and I think the Hon'ble Minister will agree with this and do justice and equity to the tax payer.

Sri M. V. KRISHNAPPA.—The idea is not to squeeze money. Even if it is a question of squeezing money for a good cause, it is not unfair. But here it is not for a bad purpose. The lowest denomination stamp is 5 nP. ಯಾವ ರೀತಿಯಲ್ಲಾದರೂ ಪ್ರಜೆಗಳ ಹತ್ತಿರ ಹಣ ಗಳಿಸಬೇಕೆಂಬ ಉದ್ದೇಶವಿಲ್ಲ. 5 ನಯೇ ಪೈಸೆ ಅತ್ಯಂತ ಕಡಮೆ ಡಿನಾಮಿನೇಷನ್ ಇರುವುದರಿಂದ ಅದಕ್ಕಿಂತ ಕಡಮೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ವಿ. ಗೌಡ.—8 ನಯೇ ಪೈಸೆ ಇದ್ದರೆ 10 ನಯೇ ಪೈಸೆ ತೆಗೆದುಕೊಳ್ಳುತ್ತೀರಿ. 6 ನಯೇ ಪೈಸೆ ಇದ್ದರೂ 10 ನಯೇ ಪೈಸೆ ತೆಗೆದುಕೊಳ್ಳುತ್ತೀರಿ. ಅದು ನ್ಯಾಯಸಮಂಜಸವಾಗಿಲ್ಲ. ಆದ್ದರಿಂದ ಇದನ್ನು ಒಪ್ಪಿಕೊಳ್ಳಬಹುದು ಎಂದು ಹೇಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಒಪ್ಪುವುದಕ್ಕಾಗುವುದಿಲ್ಲ. ಲೆಕ್ಕದಲ್ಲಿ ಬಹಳ ತೊಂದರೆ ಬರುತ್ತದೆ.

Mr. SPEAKER.—The question is :

'That in the proviso to the proposed new section (3A) line (5) after the words "a fraction of five naye paise" the words "if the fraction is more than three naye paise" shall be added.'

I think Noes have it.

Sri K. LAKKAPPA.—Sir, I press for a division.

Mr. SPEAKER.—I will again put it to the vote.

The question is :

'That in the proviso to the proposed new section (3A), line (5), after the words 'a fraction of five naye paise', the words 'if the fraction is more than three naye paise' shall be added'.

I think NAYS have it

Sri V. S. PATIL.—I demand a division, Sir.

Mr. SPEAKER.—The question is :

"That in the proviso to the proposed new section (3A), line (5), after the words 'a fraction of five naye paise', the words 'if the fraction is more than three naye paise' shall be added.

Division :—For : 31 ; Against : 48.

The motion was negatived.

Mr. SPEAKER.—I will put clause 5 to the House.

The question is :

"That clause 5 stand part of the Bill."

The motion was adopted

Clause 5 was added to the Bill.

Sri G. V. GOWDA.—I beg to move :

"That for the words 'four rupees and fifty naye paise', the words 'three rupees and seventy five naye paise' shall be substituted."

Mr. SPEAKER.—Amendment moved :

"That for the words 'four rupees and fifty naye paise', the words 'three rupees and seventy five naye paise' shall be substituted."

†ಶ್ರೀ ಜಿ. ವಿ. ಗೌಡ.—ಈ ತಿದ್ದುಪಡಿ ಆರನೆಯ ಕ್ಲಾಜಿಗೆ ಸಂಬಂಧಪಟ್ಟಿದೆ. ಸರ್ಕಾರದವರು ಸೇಕಡ 50 ರಷ್ಟು ಜಾಸ್ತಿ ಮಾಡಬೇಕೆಂದು ತಿದ್ದುಪಡಿ ತಂದಿದ್ದಾರೆ. ಆದರೆ ನನ್ನ ತಿದ್ದುಪಡಿ ಸೇಕಡ 25 ರಷ್ಟು ಜಾಸ್ತಿ ಮಾಡುವುದು ನ್ಯಾಯ ಎಂದು ಸೂಚಿಸುತ್ತದೆ. ಯಾವುದಾದರೂ ಸ್ಟಾಂಪ್ ಡ್ಯೂಟಿ ಕಟ್ಟಿರುವ ಇನ್‌ಸ್ಟ್ರುಮೆಂಟಿನ ಡೂಪ್ಲಿಕೇಟ್ ಬೇಕಾದರೆ ಈಗಿರುವ ವಿಧೇಯಕದ ಪ್ರಕಾರ ಇನ್ನು ಮುಂದೆ ನಾಲ್ಕು ರೂಪಾಯಿ 50 ನಯೇ ಪೈಸೆಗಳನ್ನು ಕೊಡಬೇಕಾಗುತ್ತದೆ. ಮೊದಲು 3 ರೂಪಾಯಿತ್ತು. ಈಗ ಸೇಕಡ 50 ರಷ್ಟು ಹೆಚ್ಚಿಸಿರುವುದು ಸರಿಯಲ್ಲ, 3 ರೂಪಾಯಿ 75 ನಯೇ ಪೈಸೆ ಆದರೂ ಹಾಕಿ, ಬಾಕಿಯಾದ್ದು ಬಿಡಿ ಎಂದು ಕೇಳಲು ನಾನು ತಿದ್ದುಪಡಿ ತಂದಿದ್ದೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಮಾನ್ಯ ಸದಸ್ಯರು ತಂದಿರುವ ತಿದ್ದುಪಡಿಯನ್ನು ಒಪ್ಪಿದರೆ ಬರುವ ಹಣ

(ಶ್ರೀ ಎಂ. ವಿ. ಕೃಷ್ಣಪ್ಪ)

ವೆಲ್ಲಾ ಹೋಗುತ್ತದೆ. ಈಗ ಸರ್ಕಾರದ ತಿದ್ದುಪಡಿ ಅಂಗೀಕೃತವಾದರೆ ನಮಗೆ ಸಾಕಷ್ಟು ಹಣ ಬರಲು ಅವಕಾಶವಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರು ತಮ್ಮ ತಿದ್ದುಪಡಿಯನ್ನು ವಾಪಸು ಪಡೆಯುವುದು ಉತ್ತಮ.

Mr. SPEAKER.—Is the Hon'ble Member pressing it or withdrawing it?

Sri G. V. GOWDA.—Allright, Sir, I will withdraw the amendment with the permission of the Chair.

The amendment was, by leave of the House withdrawn.

Mr. SPEAKER.—I will put the clause to the House.

The question is:

"That clause 6 stand part of the Bill."

The motion was adopted.

Clause 6 was added to the Bill.

Mr. SPEAKER.—There are no amendments to clauses 7 and 8.

The question is:

"That clauses 7 and 8 stand part of the Bill."

The motion was adopted.

Clauses 7 and 8 were added to the Bill.

Mr. SPEAKER.—There is an amendment to clause 9. Sri V. S. Patil may move it.

Sri V. S. PATIL.—Sir, I beg to move:

"That in item (i), line 2, for the words 'two rupees and twenty-five naye paise', the words 'one rupee and fifty naye paise' shall be substituted."

Mr. SPEAKER.—Amendment moved:

"That in item (i), line 2 for the words 'two rupees and twenty-five naye paise', the words 'one rupee and fifty naye paise' shall be substituted."

Sri V. S. PATIL.—I have moved this amendment with a view to bring in these items in line with the proposed increase in Stamp duty. The Government says that they want to increase by fifty per cent. But here in this particular Clause, for one rupee, Government wants to charge now Rs. 2.50 nP. This is out of all proportion. Government should not do such things, by saying one thing and doing another thing. That is why I should like to request the Hon'ble Minister to accept this amendment so as to be in accordance with the views or principles on which this particular Bill has been brought before this House. I hope, Sir, Government is not going to lose much by accepting my amendment.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ನಗರ-ಉತ್ತರ).—ಪ್ರಪೋರ್ಷನೇಟ್ ಆಗಿ ಹೆಚ್ಚಿಸುವುದಾಗಿ ಮಾನ್ಯ ಮಂತ್ರಿಗಳು ಹೇಳಿದರು. ಆ ರೀತಿ ಅವರು ಮಾಡಿದ್ದರೆ ಬಹಳ ಚೆನ್ನಾಗಿತ್ತು. ಈ ಸಂದರ್ಭದಲ್ಲಿ ಹಾಗೆ ಮಾಡಿಲ್ಲ, ಬಹಳ ಜಾಸ್ತಿ ಮಾಡಿದ್ದಾರೆ, ಒಂದು ರೂಪಾಯಿ ಇದ್ದುದನ್ನು ಎರಡು ರೂಪಾಯಿ 25 ನಯೇ ಪೈಸೆ ಮಾಡಿರುವುದು ಬಹಳ ಜಾಸ್ತಿ. ಆದುದರಿಂದ ಶ್ರೀ ಪಾಟೀಲ್‌ರವರು ತಂದಿರುವ ತಿದ್ದುಪಡಿಯನ್ನು ದಯವಿಟ್ಟು ಒಪ್ಪಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

Mr. SPEAKER.—Does the Hon'ble Minister accept the amendment?

Sri M. V. KRISHNAPPA.—No, Sir. I cannot. Actually it was Rs. 1.50 nP. before.

Mr. SPEAKER.—The question is:

"That in item (i), line 2, for the words "two rupees and twenty-five naye paise", the words "one rupee and fifty naye paise" shall be substituted."

The motion was negatived.

Mr. SPEAKER.—The question is:

"That Clause 9 stand part of the Bill."

The motion was adopted.

Clause 9 was added to the Bill.

Mr. SPEAKER.—There are no amendments to Clause 10. The question is:

"That Clause 10 stand part of the Bill."

The motion was adopted.

Clause 10 was added to the Bill.

Mr. SPEAKER.—Clause 11. There is an amendment in the name of Sri Venkatai Gowda. He may move it.

Sri G. V. GOWDA.—I beg to move:

'That in line 3 for the words "ten rupees" and "one Rupee", the words "seven rupees and fifty naye paise" and "seventy naye paise" shall respectively be substituted.'

Mr. SPEAKER.—Amendment moved:

'That in line 3, for the words "ten rupees" and "one Rupee" the words "seven rupees and fifty naye paise" and "seventy naye paise" shall respectively be substituted.'

†ಶ್ರೀ ಜಿ. ವಿ. ಗೌಡ. ಸ್ವಾಮಿ, ಈ ತಿದ್ದುಪಡಿ 31ನೆಯ ಸೆಕ್ಷನ್‌ಗೆ ಅನ್ವಯಿಸುತ್ತದೆ. ಸ್ಟ್ಯಾಂಪ್ ಡ್ಯೂಟಿಯ ಮೇಲೆ ಈ ಹಣವನ್ನು ಕೇಳುತ್ತಿಲ್ಲ. ಇದು ಫೀಜು 31ನೆಯ ಸೆಕ್ಷನ್ ಪ್ರಕಾರ, ಒಂದು ದಸ್ತಾವೇಜನ್ನು ಬರೆದುಕೊಂಡು ಅದಕ್ಕೆ ಎಷ್ಟು ಸ್ಟ್ಯಾಂಪ್ ಹಾಕಬೇಕೆಂದು ಕೇಳಿದರೆ ಅದನ್ನು ಹೇಳಲು ಕಲೆಕ್ಟರಿಗೆ ಐದು ರೂಪಾಯಿ ಕೊಡಬೇಕೆಂದಿದೆ. ಈಗ ಇದನ್ನು 10 ರೂಪಾಯಿ ಎಂದು ತಿದ್ದುಪಡಿ ಮಾಡಿದ್ದಾರೆ. ಎಂದರೆ ಸೇಕಡ 100ರಷ್ಟು ಹೆಚ್ಚಾಯಿತು. ಆದರೆ ಮಂತ್ರಿಗಳು ಸೇಕಡ 50 ಮಾತ್ರ ಹೆಚ್ಚಿಸಿದೆಯೆಂದು ಹೇಳುತ್ತಾರೆ. ಸಲಹೆ ಕೇಳಲು ಕಲೆಕ್ಟರ್ ಹತ್ತಿರ ಹೋದಾಗ ಅವರಿಗೆ ಕೊಡಬೇಕು, ಇದು ಸ್ಟ್ಯಾಂಪ್ ಡ್ಯೂಟಿ ಅಲ್ಲ. ಇದನ್ನು ಹೆಚ್ಚಿಸುವುದು ನ್ಯಾಯ್ಯವಲ್ಲ. ಅನೇಕ ರೈತರು ವಿದ್ಯಾವಂತರಲ್ಲ; ಇಂಥವರು ಒಂದು ಪತ್ರಕ್ಕೆ ಎಷ್ಟು ಸ್ಟ್ಯಾಂಪ್ ಹಚ್ಚಬೇಕೆಂದು ಕೇಳಿದರೆ ಅದಕ್ಕೆ 10 ರೂಪಾಯಿ ಕೊಡಬೇಕೇ ? ಬರೆಯುದಿದ್ದರೆ ಒಂದು ರೂಪಾಯಿ ಕೊಡಬೇಕೆ ಇದು ನ್ಯಾಯವಲ್ಲ. ಆದುದರಿಂದ ನನ್ನ ತಿದ್ದುಪಡಿಯನ್ನು ಒಪ್ಪಬೇಕು. ಇದೇನೂ ದಸ್ತಾವೇಜಿನ ಮೇಲೆ ಸ್ಟ್ಯಾಂಪ್ ಡ್ಯೂಟಿ ಅಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಈ ತಿದ್ದುಪಡಿಯನ್ನೊಪ್ಪುತ್ತೇನೆ.

Mr. SPEAKER.—The question is:

'That in line 3, for the words "ten rupees" and "one rupee", the words "seven rupees and fifty naye paise" and "seventy naye paise" shall respectively be substituted.'

The motion was adopted.

Mr. SPEAKER.—The question is:

"That Clause 11, as amended, stand part of the Bill."

The motion was adopted.

Clause 11, as amended, was added to the Bill.

Mr. SPEAKER.—The question is:

"That Clauses 12, 13, 14 and 15 stand part of the Bill."

The motion was adopted.

Clauses 12, 13, 14 and 15 were added to the Bill.

Mr. SPEAKER.—Clause 16. There is an amendment in the name of Sri Venkatai Gowda. It is a negative amendment and it cannot be moved. He may oppose the clause if he wants.

Sri G. V. GOWDA.—Section 44 says:

"(1) where any penalty is paid under Section 34 or Section 39, the Chief Controlling Revenue Authority may, upon application in writing made within one year from the date of the payment, refund such penalty wholly or in part.

(2) where, in the opinion of the Chief Controlling Revenue Authority, stamp duty in excess of that which is legally chargeable has been charged and paid under Section 34 or Section 39 such authority may, upon application in writing made within three months of the order charging the same, refund the excess."

ಸ್ವಾಮಿ, ಮೂಲ ಕಾನೂನಿನ 34 ಅಥವಾ 39ನೆಯ ಸೆಕ್ಷನ್ ಪ್ರಕಾರ ಪೆನಾಲ್ಟಿ ಅಥವಾ ಹೆಚ್ಚು ತೆರಿಗೆ ಕೊಟ್ಟಿದ್ದಾರೆ, ಎಂದರೆ ಕೊಡಬೇಕಾದ ಸ್ಟ್ಯಾಂಪ್ ಡ್ಯೂಟಿಗಿಂತ ಹೆಚ್ಚು ಕೊಟ್ಟಿದ್ದರೆ ಅದನ್ನು ಒಂದು ವರ್ಷ ಮತ್ತು ಮೂರು ತಿಂಗಳೊಳಗೆ ಚೀಫ್ ಕಂಟ್ರೋಲಿಂಗ್ ರೆವಿನ್ಯೂ ಆಥಾರಿಟಿಗೆ ಅರ್ಜಿ ಕೊಟ್ಟು ವಾಪಸು ಪಡೆಯಲು 44ನೆಯ ಸೆಕ್ಷನ್ ಪ್ರಕಾರ ಅವಕಾಶವಿದೆ. ಆದರೆ, ಈ ತಿದ್ದುಪಡಿಯಲ್ಲಿ ಅವಧಿ ಮುಗಿದ ಮೇಲೆ ಯಾವಾಗಲಾದರೂ ಸರ್ಕಾರ ಆ ಮೊಬಲಗನ್ನು ವಾಪಸು ಕೊಡಲು ಆಜ್ಞೆ ಮಾಡಬಹುದೆಂದು ಅಧಿಕಾರ ಕೊಡಲಾಗಿದೆ.

"Provided that with the sanction of the State Government, the Chief Controlling Revenue Authority may make the refund after the period specified in sub-section (1) or (2)".

Mr. SPEAKER.—Is it not in favour of the party.

Sri G. V. GOWDA.—It may be, but sufficient power has been given to the officers under (1) and (2) of Section 44 to refund. Why should the parties be required to approach Government in that cause? I am opposed to the parties being required to approach Government for this relief.

Mr. SPEAKER.—Only the sanction of the Government is necessary. They are not to approach Government.

Sri G. V. GOWDA.—As the proviso stands, after the expiry of the period of limitation prescribed under (1) and (2) when the parties approach the officer concerned, he may ask them to go to Government. On the contrary, if the officer himself takes the sanction of Government and refunds, it would be all right.

Mr. SPEAKER.—I suppose that is the amendment in the proviso.

Sri G. V. GOWDA.—It may mean both. The party may approach the Government direct for sanction for refund or the officer concerned may take the sanction of Government and then refund to the party. The proviso only says: The Chief Controlling Revenue Authority *may*......"

Mr. SPEAKER.—Sub-sections (1) and (2) deal with refund by the Chief Controlling Revenue Authority in certain cases within a specified period. To that, this is a proviso to make the refund even after the specified period with the sanction of Government. The initiative for that rests with the Chief Controlling Revenue Authority.

Sri G. V. GOWDA.—Suppose the application is made after the prescribed period and the Authority concerned may refuse to entertain the application saying that it is time-barred.

Mr. SPEAKER.—That is why the proviso says that the Authority concerned may refund with the sanction of Government.

Sri G.V. GOWDA.—So the party has to approach Government for the purpose.

Mr. SPEAKER.—The proviso does not say "on an application made by the party to Government........" The initiative rests with the Controlling Authority to take the sanction of Government.

Sri G. V. GOWDA.—Since it is the Government which has to sanction the refund after the prescribed period is over, the party may approach the Government directly.

Mr. SPEAKER.—Where is the provision for approaching the Government directly at all? The approach is always to the Chief Controlling Revenue Authority and not to the Government.

Sri G. V. GOWDA.—If the application is made after the period of limitation, the Chief Controlling Revenue Authority has to entertain, seek Government sanction, consider it on its merits; but if he chooses to reject the application, what is the remedy? Therefore, I am suggesting that a period must be prescribed within which the authority under this Clause is to entertain such applications.

6-00 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಅವರು ತಂದಿರುವ ರೀತಿಯಲ್ಲಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. It is not in order. Belated applications ಸಹಾಯ ಮಾಡುವುದಕ್ಕೆಂದೇ ಸರ್ಕಾರದವರು ಇದನ್ನು ಮಾಡಿರುವುದು. ಸಾಮಾನ್ಯವಾಗಿ ಅದೇನೂ ಸರ್ಕಾರಕ್ಕೆ ಬರಬೇಕಾದ್ದಿಲ್ಲ. ಲಿಮಿಟೇಷನ್ ಆಗಿರುವ ಸಂದರ್ಭಗಳಲ್ಲಿ ಮಾತ್ರ ಬರಬೇಕು ಅಷ್ಟೆ.

ಶ್ರೀ ಜಿ. ವಿ. ಗೌಡ.—ತಮ್ಮ ಉದ್ದೇಶ ಸಫಲವಾಗಬೇಕೆಂಬುದೇ ನಮ್ಮ ಆಶಯ. ಅದನ್ನು ಸಾಧನೆ ಮಾಡುವುದಕ್ಕೆ ನಾನು ಇದನ್ನು ಸೂಚಿಸಿರುವುದು. ಕಾಲ ಮೀರಿ ಬಂದ ಸಂದರ್ಭಗಳಲ್ಲಿ ಆಫೀಸರುಗಳು ರಿಜೆಕ್ಟ್ ಮಾಡಿದರೂ ಮಾಡಬಹುದಾಗಿದೆ. ಅಂಥ ಸಂದರ್ಭಗಳಲ್ಲಿ ಪಾರ್ಟಿಗಳೇನೂ ಮಾಡುವುದಕ್ಕಾಗುವುದಿಲ್ಲ. ಅಂಥ ಸಂದರ್ಭಗಳಿಗೆ ಕೆಳಗೆ ಅವಕಾಶವಿರಕೂಡದೆಂದೇ ನಾನು ಹೇಳುತ್ತಿರುವುದು.

Mr. SPEAKER.—I think this Clause has been sufficiently discussed. I will now put it to the House.

The question is:

"That Clause 16 stand part of Bill."

The motion was adopted.

Mr. SPEAKER.—We have only ten minutes left for this Bill according to the time allotted by the Business Advisory Committee. I do not think ten minutes will suffice. I, therefore, propose to extend it by half-an-hour and we will take further consideration of Clauses tomorrow. The House will now adjourn and meet again tomorrow at one of the Clock.

The House adjourned at Five Minutes past Six of the Clock to meet again at One of the Clock on Wednesday, the 12th September 1962.